REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 14 | ISSUE - 9 | JUNE - 2025

# ಕಿತ್ತೂರ ಕರ್ನಾಟಕದ ಜೈನ ಕವಿಗಳು

ವೈಶಾಲಿ ಮುನ್ನೋಳಿ
ಸಂಶೋಧನ ವಿದ್ಯಾರ್ಥಿನಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

ಡಾ. ಜಗದೀಶ ಕಿವುಡನವರ
ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ.

**ಪೀಠಿಕೆ**



ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಜೈನರೇ ಕನ್ನಡದಲ್ಲಿ ಮೊದಲು ಸಂಪೂರ್ಣತೆಯನ್ನು ತಂದವರು. ಎಲ್ಲಾ ಭಾಷೆಗಳಂತೆ ಕನ್ನಡದಲ್ಲಿಯೂ ಕಾವ್ಯ ರಚನೆಯ ಉದ್ದೇಶ ಧರ್ಮದ ಪ್ರಚಾರ ಮತ್ತು ಪ್ರಸಾರವೇ ಆಗಿತ್ತು, ಆದ್ದರಿಂದ ಸಾಹಿತ್ಯವು ಧರ್ಮಪ್ರಚಾರ ಮತ್ತು ಪ್ರಸಾರದ ಮಾಧ್ಯಮವಾಯಿತು. "ಅರೆವುದು ಧರ್ಮಮಂ ಕಾವ್ಯಧರ್ಮ ಮುಮಂ" ಹಾಗೂ "ಬೆಳಗುವೆನಿಲ್ಲಿ ಲೌಕಿಕ ಮನಲ್ಲಿ ಜಿನಾಗಮಮಂ" ಎಂಬ ಪಂಪನ ಮಾತುಗಳೇ ಸಾಹಿತ್ಯವು ಧರ್ಮ ಪ್ರಚಾರದ ಪರಿಣಾಮಕಾರಿಯಾದ ಸಾಧನವಾಯಿತು ಎಂಬುವುದನ್ನು ಸಾಬೀತುಪಡಿಸುತ್ತವೆ. ಜೈನ ಕವಿಗಳು ಹೆಚ್ಚಾಗಿ ಲೌಕಿಕ ಮತ್ತು ಆಗಮಿಕ ಎಂಬ ಧಾರ್ಮಿಕ ಮತ್ತು ಲೋಕದ ಬಗ್ಗೆ ಹೊಸ ಪರಂಪರೆಯ ಕಾರಣಕರ್ತರಾದರು. ಸಮೃದ್ಧವಾದ ಸಾಹಿತ್ಯ ರಚನೆಗೆ ರಾಜನ ಪ್ರೋತ್ಸಾಹ ಮತ್ತು ಆಶ್ರಯ ಕೂಡಾ ಅಷ್ಟೇ ಪೂರಕವಾಗಿತ್ತು ಎಂದು ಹೇಳಬಹುದು.

ಪಂಪನಿಂದಾಗಿ ಅರಿಕೇಸರಿ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನ ಪಡೆದಿದ್ದಾನೆ. ಅದೇ ರೀತಿ ನಯಸೇನನು ಕೂಡಾ ರಾಜರಿಂದ ಗೌರವಿಸಲ್ಪಟ್ಟಿದ್ದನು. ರಾಜಾಶ್ರಯದಲ್ಲಿ ಬೆಳೆದ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಾವಿರಾರು ಕನ್ನಡ ಕೃತಿಗಳು ರಚನೆಯಾಗಿವೆ. ಆರ್. ನರಸಿಂಹಾಚಾರ ಅವರು ಕನ್ನಡಸಾಹಿತ್ಯದ ಚರಿತ್ರೆಯನ್ನು ಮೊದಲು ಬರೆದರು ತಮ್ಮ ಮೂರು ಸಂಪುಟಗಳಲ್ಲಿ 1500ಕ್ಕಿಂತ ಹೆಚ್ಚು ಕವಿ ಮತ್ತು ಕೃತಿಗಳ ಬಗ್ಗೆ ವಿವರಿಸಿದ್ದಾರೆ. ಜೈನಯುಗವನ್ನು ಕನ್ನಡ ಸಾಹಿತ್ಯದ ಆರಂಭದಿಂದ 12ನೇ ಶತಮಾನದ ಮಧ್ಯದವರೆಗೆ ಒಂದನೇ ಸಂಪುಟದಲ್ಲಿ ವಿವರಿಸಿದ್ದಾರೆ. ಆ ಕುರಿತಂತೆ ಕಿತ್ತೂರು ಕರ್ನಾಟಕ ಭಾಗದ ಪ್ರಮುಖ ಜೈನ ಕವಿಗಳು ಮತ್ತು ಕೃತಿಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಪಂಪ :** ಕನ್ನಡ ಸಾಹಿತ್ಯದ ಆದಿಕವಿಯಾದ ಪಂಪನ ಜೀವನ ಮತ್ತು ಕೃತಿಗಳನ್ನು ತಿಳಿಯಲು ಲಭ್ಯವಿರುವ ಮುಖ್ಯ ಆಧಾರಗಳೆಂದರೆ *ಆದಿಪುರಾಣ*, *ಪಂಪಭಾರತ* ಮತ್ತು ಆಂಧ್ರಪ್ರದೇಶದ ಕರೀಂ ನಗರ ಜಿಲ್ಲೆಯ ಕುರ್ಕ್ಯಾಲ್ ಗ್ರಾಮದ ಕ್ರಿ. ಶ. ಸುಮಾರು 950ರ ಬಂಡೆಗಲ್ಲು ಶಾಸನ.[1] ಈ ಶಾಸನವನ್ನು "ಬೊಮ್ಮಲಗುತ್ತ ಶಾಸನ" ಎಂದು ಕರೆಯುತ್ತಾರೆ. ತೆಲುಗು ಶಬ್ದ ಬೊಮ್ಮಲಗುತ್ತ ಎಂದರೆ ಆಕೃತಿಗಳ ಬೆಟ್ಟ, ಸಿದ್ಧಶಿಲಾ ಬೆಟ್ಟ ಎಂದರ್ಥವಾಗಿದೆ.[2] ಈ ಶಾಸನದಲ್ಲಿ ಪಂಪನ ಸಹೋದರ (ತಮ್ಮ) ಜಿನವಲ್ಲಭನು ತ್ರಿಭುವನ ತಿಲಕ ಬಸದಿಯನ್ನು ನಿರ್ಮಿಸಿದ್ದರ ಬಗ್ಗೆ ಮತ್ತು ಎರಡನೆ ಅರಿಕೇಸರಿಯ ಆಡಳಿತದ ಬಗ್ಗೆ ಮಾಹಿತಿ ಒದಗಿಸುತ್ತದೆ. ಇದಲ್ಲದೆ ಪಂಪನಿಗೂ ಬನವಾಸಿಗೂ ಇರುವ ಸಂಬಂಧವನ್ನು ಸಹ ತಿಳಿಸುತ್ತದೆ. ಪಂಪನಿಗೆ ಧರ್ಮಪುರಿ ಎಂಬ ಗ್ರಾಮವನ್ನು ಎರಡನೇ ಅರಿಕೇಸರಿ ದತ್ತಿ ಕೊಟ್ಟಿದ್ದು ಕುರ್ಕ್ಯಾಲ್ ಶಾಸನದಿಂದ ತಿಳಿಯುತ್ತದೆ. ಈ ಶಾಸನ "ನಮ: ಸಿದ್ಧ್ಯಭ್ಯ" ಎಂದು ಪ್ರಾರಂಭವಾಗುತ್ತದೆ. ಈ ಶಾಸನವನ್ನು ಪಿ.ಬಿ.ಪರಬ್ರಹ್ಮಶಾಸ್ತ್ರಿಯವರು 1976 ರಲ್ಲಿ ಸಂಪಾದಿಸಿ ಪ್ರಕಟಿಸಿದ

[1] ಅಜಿತ ಪ್ರಸಾದ: *ಅವಿಭಜಿತ ಧಾರವಾಡ ಜಿಲ್ಲೆಯ ಜೈನ ಇತಿಹಾಸ ಮತ್ತು ಪುರಾತತ್ವ*, ಅರಿಹಂತ ಪ್ರಕಾಶನ, ಧಾರವಾಡ,2025,ಪು,265.

[2] *Department of Heritage telangana,* 2017,p.41.

'*Inscriptions of Andrapradesh, Kareem Nagar District*' ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಈ ಶಾಸನ ರಚಿಸಿದ ಜಿನವಲ್ಲಭನು ಅನೇಕ ಜೈನ ಬಸದಿಗಳು, ಕೊಳಗಳು, ಉದ್ಯಾನಗಳನ್ನು ನಿರ್ಮಿಸಿದ್ದನು. ಪಂಪ ಮತ್ತು ಜಿನವಲ್ಲಭ ಇಬ್ಬರೂ ಉತ್ತರ ಕರ್ನಾಟಕದ ಅಣ್ಣಿಗೇರಿಯ ಅಬ್ಬಣಬ್ಬೆ ಮತ್ತು ಭೀಮಪ್ಪಯ್ಯ (ಆಂಧ್ರಪ್ರದೇಶ)ನ ಮಕ್ಕಳೆಂದು ಈ ಶಾಸನದಿಂದಲೇ ತಿಳಿಯುತ್ತದೆ.[3] ಪಂಪನು ಜೈನಕವಿಯಾಗಿದ್ದು ಉತ್ತರ ಕರ್ನಾಟಕ ಭಾಗದವನಾಗಿದ್ದಾನೆ. ಹಾಗೆಯೇ ಕೊಂಡಕುಂದಾನ್ವಯಕ್ಕೆ ಸೇರಿದವನೆಂದು ತಾನೇ ಹೇಳಿಕೊಂಡಿದ್ದಾನೆ. ಈತನಿಗೆ ಕವಿತಾ ಗುಣಾರ್ಣವ, ಪುರಾಣಕವಿ, ಸರಸ್ವತೀಮಣಿಹಾರ ಎಂಬ ಇತ್ಯಾದಿ ಬಿರುದುಗಳಿದ್ದವು. ಅದೇ ರೀತಿ ಪಂಪನು ಕಲ್ಯಾಣ ಚಾಲುಕ್ಯರ ದೊರೆಯಾದ ಅರಿಕೇಸರಿಯ ಆಸ್ಥಾನ ಪಂಡಿತನಾಗಿದ್ದನು. ಈತನು ಕನ್ನಡದಲ್ಲಿ *ಆದಿಪುರಾಣ*, *ಪಂಪಭಾರತ* ಅಥವಾ *ವಿಕ್ರಮಾರ್ಜುನ ವಿಜಯ* ಎಂಬ ಎರಡು ಕನ್ನಡದ ಮಹಾಕಾವ್ಯಗಳನ್ನು ಬರೆದಿದ್ದಾನೆ ಬರೆದಿದ್ದಾನೆ.[4]

**ಪಂಪನ ಜೀವನ :** ಈತನು ದುಂದುಭಿ ವರ್ಷದಲ್ಲಿ ಹುಟ್ಟಿದನೆಂದು *ಆದಿಪುರಾಣದ* "ದುಂದುಭಿ ಗಭೀರನಿನದಂ ದುಂದುಭಿ ಸಂವತ್ಸರೋದ್ಭವಂ" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಇದೇ ಕೃತಿಯ ಕೊನೆಯ ಪದ್ಯಗಳಾದ 'ಶಕವರ್ಷಮೆಂಟುನೂರರ್ಕೆ ಕಡೆಯೊಳರುವತ್ತು ಮಾರು ಸಂದಂದು ಜಗತ್ಪ್ರಕಟಪ್ಲವ ಸಂವತ್ಸರದ ಕಾರ್ತಿಕಂ ಮುದಮುನಿಯೆ ನಂದಿಶ್ವರದೊಳ್। ನೆಗಲ್ವುದಂದೀ। ಜಗದೊಳ ಪುದಿದು ಸಾಗರಾಂತಂ ಬರೆಗಂ॥' ಎಂಬ ಪದ್ಯಗಳಿಂದ *ಆದಿಪುರಾಣವನ್ನು* ಶಕ 863ನೆಯ ಪ್ಲವ ಸಂವತ್ಸರದಲ್ಲಿ ಎಂದರೆ ಕ್ರಿ.ಶ. 941ರಲ್ಲಿ ಬರೆದಂತೆ ವ್ಯಕ್ತವಾಗುತ್ತದೆ. ದುಂದುಭಿಯವರೆಗೆ ಲೆಕ್ಕ ಮಾಡಿದರೆ ಇವನು ಕ್ರಿ. ಶ. 902ನೆಯ ವರ್ಷದಲ್ಲಿ ಹುಟ್ಟಿದಂತೆ ತಿಳಿದುಬರುತ್ತದೆ. ಈ ಕೃತಿ ರಚನೆ ಮಾಡಿದಾಗ ಪಂಪನಿಗೆ 39 ವರ್ಷ ವಯಸ್ಸಾಗಿತ್ತು.

*ಪಂಪಭಾರತದ* ಕೊನೆಯಲ್ಲಿ ತನ್ನ ವಂಶಾವಳಿ ಬಗ್ಗೆ ಈ ಮುಂದಿನಂತೆ ಹೇಳಿದ್ದಾನೆ. ವೆಂಗಿಮಂಡಲದ ವೆಂಗಿಪೆಳುವಿಗೆ ಸೇರಿದ ವಸಂತ ಕೊಟ್ಟೂರು, ನಿಡಗುಂದಿ, ವಿಕ್ರಮಪುರ ಎಂಬ ಅಗ್ರಹಾರಗಳಲ್ಲಿ ಅಗ್ರಗಣ್ಯನಾಗಿ ವತ್ಸಗೋತ್ರೋದ್ಭವನಾಗಿ ಮಾಧವ ಸೋಮಯಾಜಿಯೆಂಬ ಬ್ರಾಹ್ಮಣ ಮಗ ಅಭಿಮಾನಚಂದ್ರ ಇವನ ಮಗ ಕೋಮರಯ್ಯ, ಅವನ ಮಗ ಅಭಿರಾಮದೇವರಾಯ ಈತನು ಮತಗಳಲ್ಲೆಲ್ಲಾ ಜೈನಮತವೇ ಶ್ರೇಷ್ಠವೆಂದು ತಿಳಿದು ಜಿನಧರ್ಮವನ್ನು ಅವಲಂಭಿಸಿದನು. ಇವನ ಮಗನೇ ಆದಿಪಂಪನೆಂದು ಹೇಳಿಕೊಂಡಿದ್ದಾನೆ.[5]

**ಪಂಪನ ವಿದ್ಯಾಭ್ಯಾಸ :** ಈತನ ಅಂಕಿತನಾಮ 'ಪದ್ಮಪ'(ಪದ್ಮ+ಅಪ್ಪ) ಎಂದು ಇದ್ದಿರಬೇಕು. ಅದು ಆಡು ಮಾತಿನಲ್ಲಿ ಪಂಪ ಎಂದಾಗಿರಬೇಕು. ಪಂಪನ ಗುರು ದೇವೇಂದ್ರ ಮುನೀಂದ್ರರ ಬಗ್ಗೆ *ಆದಿಪುರಾಣದ* 13ನೇ ಪದ್ಯದಲ್ಲಿ 'ಮಲಧಾರಿ ಸಿದ್ಧಾಂತ ಮುನೀಶ್ವರ, ದೇವೇಂದ್ರಮುನಿ, ಜಯನಂದಿ ಮುನಿಗಳನ್ನು ಸ್ಮರಿಸಿ, ಆ ಮುನಿಗಳ ಗುರುಕುಲವನ್ನು ಪ್ರವೇಶಿಸಿದನು. ಅವರಿಂದ ಜೈನ ಆಗಮಗಳಲ್ಲಿ ಪರಿಣಿತಿಯನ್ನು ಪಡೆದನು. ತನ್ನ ಕೌಶಲ್ಯದಿಂದ ಗುರುಗಳ ಪ್ರೀತಿಗೆ ಪಾತ್ರನಾಗಿದ್ದ ಪಂಪನಿಗೆ ದೇವೇಂದ್ರಮುನಿಗಳ ಮೇಲೆ ಅಪಾರ ಭಕ್ತಿ ಇತ್ತು ಎಂದು ತಿಳಿದು ಬರುತ್ತದೆ. ಅರಿಕೇಸರಿಯ ಆಶ್ರಯದಲ್ಲಿದ್ದಾಗ ಚಾಲುಕ್ಯರಿಗೂ ರಾಷ್ಟ್ರಕೂಟರಿಗೂ ಯುದ್ಧ ನಡೆದಾಗ ಪಂಪನಿಗೆ ಜವಾಬ್ದಾರಿ ದೊರೆತಿತ್ತು ಎಂದು 'ವೇಮುಲವಾಡ ಶಾಸನದ 13ನೇ ಶ್ಲೋಕದಲ್ಲಿ ತಿಳಿಯುತ್ತದೆ.[6] ರಾಷ್ಟ್ರಕೂಟರ ಗೊಜ್ಜಿಗ ಗೋವಿಂದನನ್ನು ಪರಾಭವಗೊಳಿಸಿದ, ಮಾಂಡಲಿಕ ಅರಿಕೇಸರಿಯನ್ನು ಅರ್ಜುನನೊಂದಿಗೆ ಹೋಲಿಸಿದನು.[7]

**ಪಂಪನ ವ್ಯಕ್ತಿತ್ವ :** ಪಂಪನಿಗೆ ಬಾಳೆಯ ಸುಳಿಯಂತೆ(ಸೀಳಿದ ಬಾಳೆಯ ದಿಂಡಿನ ಒಳಭಾಗದಂತೆ) ನಸುಗಪ್ಪಾದ ಮೈಬಣ್ಣ, ಗುಂಗುರು ಗುಂಗುರಾಗಿ ಸುತ್ತಿಕೊಂಡಿದ್ದ ಮೃದುವಾದ ತಲೆಗೂದಲು, ಎತ್ತರವೂ, ಕುಳ್ಳೂ ಅಲ್ಲದ ಮಧ್ಯಮ ರೀತಿಯ ವ್ಯಕ್ತಿತ್ವ ದುಂದುಭಿಯಂತೆ ಗಂಭೀರವಾದ ಧ್ವನಿ, ಮೃದುವಾದ ಮಾತು, ಮನಸೆಳೆಯುವ ಚೆಲುವು, ಮನ್ಮಥನಂತೆ ಸೊಗಸಾಗಿದ್ದರೂ ರೂಪಕ್ಕೊಪ್ಪುವ ಉಚಿತವಾದ ಉಡುಪು ಮತ್ತು ಸುಂದರವಾದ ವೇಷವನ್ನು ಹೊಂದಿದ್ದನು. ಪಂಪನು ಸ್ವತಂತ್ರ ಮನೋಭಾವ ಮತ್ತು ಸ್ವಾಭಿಮಾನಿಯಾಗಿದ್ದನು. ಎದುರಿಗಿದ್ದ ಸೈನ್ಯವನ್ನು ಹೆದರಿಸುವ 'ಚತುರಂಗ ಬಲಕ್ಕೆ ಭಯಂಕರ'ನಾಗಿದ್ದನು.[8] ಪಂಪನು ಬನವಾಸಿಯನ್ನು ತುಂಬಾ ಪ್ರಶಂಸಿಸುತ್ತಾ ಬನವಾಸಿಯ ತಣ್ಣನೆಯ ಗಾಳಿ, ಅರಳಿದ ಮಲ್ಲಿಗೆ, ಅಲ್ಲಿನ ವಿದ್ವಾಂಸರ ಗೋಷ್ಠಿಗಳು ಪಂಪನ ಮನಸ್ಸನ್ನು ಸೂರೆಗೊಂಡಿದ್ದು ಪಂಪನ ಜನ್ಮ ಅಲ್ಲೇ ಆಗಿರಬೇಕು ಮತ್ತು ಪಂಪ ಅಲ್ಲೇ ಜೀವನ ನಡೆಸಿರಬೇಕು ಎಂದು ಅನ್ನಿಸುತ್ತದೆ. ಪಂಪನ ಖ್ಯಾತಿಯನ್ನು ಕೇಳಿ ಅರಿಕೇಸರಿ ಪ್ರೀತಿಯಿಂದ ಕರೆಸಿಕೊಂಡು ಗೆಳೆಯನಂತೆ ನೋಡಿಕೊಂಡು, ಸೇನಾಪತಿ ಎಂಬ ಪಟ್ಟವನ್ನು ಕೊಟ್ಟನು. ಅರಿಕೇಸರಿಯ ಈ ಗುಣಗಳನ್ನು ಮೆಚ್ಚಿ ಕರ್ಣ ದುರ್ಯೋಧನನ ಬಳಿ ಉಳಿಯುವಂತೆ ತಾನೂ ಅರಿಕೇಸರಿ ಬಳಿ ಉಳಿದನು.[9]

---

[3] *ಅವಿಭಜಿತ ಧಾರವಾಡ ಜಿಲ್ಲೆಯ ಜೈನ ಇತಿಹಾಸ ಮತ್ತು ಪುರಾತತ್ವ*, ಅರಿಹಂತ ಪ್ರಕಾಶನ, ಧಾರವಾಡ,2025,ಪು.265.

[4] ನರಸಿಂಹಾಚಾರ ಆರ್: *ಕರ್ನಾಟಕ ಕವಿಚರಿತೆ ಸಂ, 1*, ಬೆಂಗಳೂರು ಪ್ರೆಸ್, 1924, ಪು.30.

[5] ಅದೇ, ಪು. ಸಂ. 41.

[6] *ಪಂಪ ಮಹಾಕವಿ ಭಾಗ 1, ವಿವಿಧ ವಿಮರ್ಶಾತ್ಮಕ ಲೇಖನಗಳ ಸಂಕಲನ*, ಪಂಪ ಪ್ರಕಟನಾಲಯ, ಲಕ್ಷ್ಮೇಶ್ವರ,1951, ಪು,4.

[7] ನಾಗರಾಜಯ್ಯ ಹಂಪ: *ರನ್ನ ಸಂಪುಟ,(ಅಜಿತ ತೀರ್ಥಂಕರ ಪುರಾಣ ತಿಲಕಂ, ಸಾಹಸಭೀಮ ವಿಜಯ*), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪು.**xviii.**

[8] *ಪಂಪ ಮಹಾಕವಿ ಭಾಗ 1*, ಪಂಪ ಪ್ರಕಟನಾಲಯ, ಲಕ್ಷ್ಮೇಶ್ವರ, 1951, ಪು,43.

[9] ನರಸಿಂಹಾಚಾರ ಆರ್:*ಕರ್ನಾಟಕ ಕವಿಚರಿತೆ* ಸಂ. 1,1924, ಬೆಂಗಳೂರು ಪ್ರೆಸ್, ಪು.46.

**ಪಂಪನ ಅಮೋಘ ಕೃತಿಗಳು :** ಪಂಪನು ವಿಶ್ವಧರ್ಮ ಸ್ವರೂಪವನ್ನು ತನ್ನ ಆದಿಪುರಾಣದಲ್ಲಿ ವಿವರಿಸಿದ್ದಾನೆ. ಅದನ್ನು ತನ್ನ ಆತ್ಮ ಸಂತೋಷಕ್ಕಾಗಿ ರಚಿಸಿದನು. ಅರಿಕೇಸರಿಯು ಪಂಪನಿಗೆ *ಪಂಪಭಾರತವನ್ನು* ಬರೆಯುವಂತೆ ಪ್ರೇರೇಪಿಸಿದಾಗ ಪಂಪನು ತನ್ನ ರಾಜನ ಇಷ್ಟದಂತೆ *ಪಂಪಭಾರತವನ್ನು* ಬರೆದನು.

***ಆದಿಪುರಾಣ:***

ಪಂಪನ ಮೊದಲ ಕಾವ್ಯ 'ಆದಿಪುರಾಣ' ಈಗ ದೊರೆತಿರುವ ಕನ್ನಡ ಕಾವ್ಯಗಳಲ್ಲಿ ಮೊತ್ತಮೊದಲನೆಯದು. ಇದನ್ನು ಕ್ರಿ.ಶ. 940ರಲ್ಲಿ ಪಂಪ ರಚಿಸಿದನು. ಆಗ ಪಂಪ 39 ವರ್ಷದವನಾಗಿದ್ದನು. ಈ ಕೃತಿಯು ಗದ್ಯ–ಪದ್ಯಗಳ ಮಿಶ್ರಣದ ಚಂಪೂಕಾವ್ಯವಾಗಿದೆ. ಒಟ್ಟು 16 ಆಶ್ವಾಸಗಳ ಕೃತಿಯಾಗಿದ್ದು, ಮುಂದಿನ ಜೈನಪುರಾಣಗಳಿಗೆಲ್ಲ ಪಂಪನ ಆದಿಪುರಾಣವೇ ದಿಕ್ಸೂಚಿಯಾಯಿತು. ಪಂಪನು ಈ ಗ್ರಂಥದಲ್ಲಿ ಆದಿಬ್ರಹ್ಮನನ್ನು ಸ್ತುತಿಸಿ, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸಾಧುಗಳು, ಚಕ್ರೇಶ್ವರಿ(ವೃಷಭನಾಥನ ಯಕ್ಷಿ) ವೃಷಭಯಕ್ಷನನ್ನು, ಸರಸ್ವತಿಯನ್ನು ಸ್ತುತಿಸಿ, ನಂತರ ಸಮಂತಭದ್ರರಿಂದ ಹಿಡಿದು ಅಕಳಂಕದೇವನವರೆಗೆ ಗುರುಗಳನ್ನು ಸ್ತುತಿಸಿದ್ದಾನೆ. ಈ ಗ್ರಂಥದಲ್ಲಿ ಮಗಳಿಗೆ ತಂದೆ ತಾಯಿಗಳು ಹೇಳುವ ಬುದ್ಧಿವಾದ, ಅಳಿಯನಿಗೆ ಅತ್ತೆಮಾವಂದಿರು ಹೇಳುವ ಹಿತೋಕ್ತಿಗಳು ಮುಂತಾದ ವಿಷಯಗಳ ಬಗ್ಗೆ ಪದ್ಯಗಳಲ್ಲಿ ವಿವರಿಸಲಾಗಿದೆ.[10] *ಆದಿಪುರಾಣವೆಂದರೆ* ಮೊದಲನೆ ತೀರ್ಥಂಕರ ಆದಿನಾಥ ಅಥವಾ ವೃಷಭನಾಥನಿಗೆ ಸಂಬಂಧಿಸಿದ ಕಥೆಯಾಗಿದೆ. ವೃಷಭನಾಥನೇ ಈ *ಆದಿಪುರಾಣದ* ನಾಯಕ, ಈತನ ಜೊತೆಗೆ ಈತನ ಇಬ್ಬರು ಮಕ್ಕಳಾದ ಭರತ ಮತ್ತು ಬಾಹುಬಲಿ, ಇನ್ನೂ ಐವರು ಮಕ್ಕಳು ಶ್ರೇಯಾಂಸ(ಆದಿದಾನ ತೀರ್ಥ ಪ್ರವರ್ತಕ), ವೃಷಭಸೇನರ(ಪ್ರಥಮ ಗಣಧರ) ಪೂರ್ವಜನ್ಮ ಮತ್ತು ವರ್ತಮಾನ ಜನ್ಮಗಳ ಕತೆಗಳನ್ನು *ಆದಿಪುರಾಣವು* ಒಳಗೊಂಡಿದೆ.

ಆದಿನಾಥನ ಪೂರ್ವಜನ್ಮಗಳ ಕತೆಗಳನ್ನು *ಆದಿಪುರಾಣದ* ಪೂರ್ವಭಾಗವೆಂದು, ಆತನಿಗೆ ಜರುಗಿದ ಪಂಚಕಲ್ಯಾಣಗಳು, ಸಾಮಾಜಿಕ ಕಾರ್ಯಗಳು, ಧರ್ಮೋಪದೇಶಗಳ ಕತೆಯನ್ನು ಉತ್ತರಭಾಗವೆಂದು ಕರೆಯಬಹುದು. ಆದಿನಾಥನ ಜನ್ಮವೃತ್ತಾಂತಗಳನ್ನು ವಿವರಿಸಿ ಕೊನೆಗೆ ಭರತವರ್ಷದಲ್ಲಿ ಅಯೋಧ್ಯಾನಗರದಲ್ಲಿ 14ನೇ ಮನು ನಾಭಿರಾಜ ಮತ್ತು ಮರುದೇವಿಯರಿಗೆ ಚೈತ್ರಮಾಸದ ಕೃಷ್ಣಪಕ್ಷದ ನವಮಿಯೆಂದು ಉತ್ತರಾಷಾಢದ ಬ್ರಹ್ಮಯೋಗದಲ್ಲಿ ಸೂರ್ಯೋದಯದ ಸಮಯಕ್ಕೆ ಆದಿ ತೀರ್ಥಂಕರ ವೃಷಭದೇವನಾಗಿ ಜನಿಸಿದನು. ಯೌವ್ವನದಲ್ಲಿ ತಂದೆಯ ಒತ್ತಾಯಕ್ಕೆ ಮಣಿದು ಕಚ್ಛ ಮತ್ತು ಮಹಾಕಚ್ಛರ ಸಹೋದರಿಯರಾದ ಯಶಸ್ವತಿ ಮತ್ತು ಸುನಂದೆಯರನ್ನು ವಿವಾಹವಾದನು. ಯಶಸ್ವತಿಗೆ ಭರತ, ನೂರುಮಂದಿ ಗಂಡುಮಕ್ಕಳು ಮತ್ತು ಬ್ರಾಹ್ಮಿ ಎಂಬ ಮಗಳು ಜನಿಸಿದರು. ಸುನಂದಾದೇವಿಗೆ ಬಾಹುಬಲಿಯೆಂಬ ಮಗ, ಸುಂದರಿ ಎಂಬ ಮಗಳು ಜನಿಸಿದರು.

ವೃಷಭನಾಥನ ಆಸ್ಥಾನ ನರ್ತಕಿಯಾದ ನಿಲಾಂಜನೆ ನೃತ್ಯ ಮಾಡುವಾಗ ಏಕಾಏಕಿ ಕುಸಿದುಬಿದ್ದು ಪ್ರಾಣಬಿಟ್ಟಳು. ಈ ಘಟನೆಯಿಂದ ಜೀವನ, ಶರೀರದ ಅನಿಶ್ಚಿತತೆಗೆ ಆಶ್ಚರ್ಯಪಟ್ಟು ಗಾಢವಾದ ಚಿಂತೆಯಲ್ಲಿ ಮುಳುಗಿದನು. ಇದರಿಂದ ಅವನಲ್ಲಿ ವೈರಾಗ್ಯ ಮೂಡಿ ರಾಜ್ಯವನ್ನು ತ್ಯಾಗ ಮಾಡಿ ತಪಸ್ಸಿಗೆ ಹೊರಟನು. ನಂತರ ಧಾರ್ಮಿಕ ಉಪದೇಶಗಳನ್ನು ನೀಡುತ್ತಾ ಧರ್ಮಕ್ಷೇತ್ರಗಳ ವಿಹಾರ ಮಾಡುತ್ತಾ ಕೈಲಾಸ ಪರ್ವತಕ್ಕೆ ಬಂದನು. ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಅಲ್ಲೇ ಮೋಕ್ಷವನ್ನು ಹೊಂದಿದನು.[11] ಪಂಪನು ತನ್ನ *ಆದಿಪುರಾಣದ* ಕೊನೆಯಲ್ಲಿ(*XVI 76-77*) *ಆದಿಪುರಾಣವನ್ನು* ಬರೆದು ಮುಗಿಸಿದ ದಿನದ ಕುರಿತು 3 ತಿಂಗಳಲ್ಲಿ ಪೂರ್ಣಗೊಳಿಸಿದ್ದಾಗಿ ಹೇಳಿದ್ದಾನೆ.[12]

***ಪಂಪಭಾರತ (ವಿಕ್ರಮಾರ್ಜುನ ವಿಜಯ):*** ಈ ಕೃತಿಯಲ್ಲಿ ಪಂಪನು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಅರ್ಜುನನನ್ನೇ ಕಥಾನಾಯಕನನ್ನಾಗಿ ಮಾಡಿ ಅರಿಕೇಸರಿಯ ಕೀರ್ತಿಯನ್ನು ಶಾಶ್ವತವಾಗಿ ಜನಮಾನಸದಲ್ಲಿ ಉಳಿಯುವಂತೆ ಮಾಡಿದ್ದಾನೆ.[13] ಇದು ಪಾಂಡವರ ಜನನದಿಂದ ಕೌರವರ ವಧೆಯಾಗುವವರೆಗಿನ ಕಥೆಯನ್ನು ಸಂಕ್ಷಿಪ್ತವಾಗಿಸಿದ್ದಾನೆ. ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾದಂತೆ ವಿವರಿಸಿದ್ದಾನೆ. ಈ ಗ್ರಂಥವು 14 ಆಶ್ವಾಸಗಳಲ್ಲಿ ವಿಭಾಗಸಲ್ಪಟ್ಟಿದೆ. ಇದರಲ್ಲಿ ಅರ್ಜುನನ ಜನನದಿಂದ ಆರಂಭಿಸಿ ರಾಜ್ಯಾಭಿಷೇಕದವರೆಗೆ ವರ್ಣಿಸಿದ್ದಾನೆ. ದ್ರೌಪದಿಯನ್ನು ಬಿಟ್ಟು ಪಂಪನು ಸುಭದ್ರೆಯನ್ನು ಕಥಾನಾಯಕಿಯನ್ನಾಗಿ ಮಾಡಿದ್ದಾನೆ. ಏಕೆಂದರೆ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದರಿಂದ ದ್ರೌಪದಿಯು ಅರ್ಜುನನೊಬ್ಬನ ಹೆಂಡತಿಯಲ್ಲವಾದ್ದರಿಂದ, ಜೊತೆಗೆ ದ್ರೌಪದಿಯ ವಸ್ತ್ರಾಪಹರಣದ ಕಥೆಯನ್ನು ಕೈಬಿಟ್ಟಿದ್ದಾನೆ.[14]

ಪಂಪನ ಕೃತಿಯಲ್ಲಿನ ಮಾರ್ಪಾಡುಗಳೆಂದರೆ *ವ್ಯಾಸಭಾರತದಲ್ಲಿ* ಅಂಬಿಕೆಅಂಬಾಲಿಕೆಯರು ವ್ಯಾಸರ ಶರೀರ ಸಂಪರ್ಕದಿಂದ ಗರ್ಭ ಧರಿಸಿದರೆ, ಇಲ್ಲಿ ಅವರ ದಿವ್ಯದೃಷ್ಟಿಯಿಂದ ಗರ್ಭಧರಿಸಿದಂತೆ ಹೇಳಿದ್ದಾನೆ. ಅಲ್ಲಿ ನಾರದನ ನಿಯಮ ಮೀರಿದ್ದರ ಕಾರಣ ಅರ್ಜುನನಿಗೆ 12 ವರ್ಷ ವನವಾಸಕ್ಕೆ ಹೋದನು. ಇಲ್ಲಿ ಬೇಸರ ಪರಿಹಾರಕ್ಕೆ ದೇಶ ಸುತ್ತಾಡಿಕೊಂಡು ಬರಲು ಹೊರಟನು ಎಂದಿದ್ದಾನೆ. ಅಲ್ಲಿ ಅರ್ಜುನ ಸಂನ್ಯಾಸಿವೇಷ ಧರಿಸಿ ಸುಭದ್ರೆಯನ್ನು ಅಪಹರಿಸಿದನೆಂದು ಕಥೆಯಿದೆ. ಇಲ್ಲಿ ಅರ್ಜುನನು ದ್ವಾರಾವತಿಗೆ ಬಂದಾಗ ಪರಸ್ಪರರು ಪ್ರೀತಿಸಿ ಒಂದಾದರೆಂದು ಪಂಪ ವಿವರಿಸಿದ್ದಾನೆ. ಇಲ್ಲಿ ಬೀಷ್ಮನಿಂದ ಜಲಮಂತ್ರೋಪದೇಶ ಪಡೆದು ಕಾಲವಂಚಕನಾಗಿ ಸರೋವರದಲ್ಲಿ ಅಡಗಿಕೊಂಡ

---

10 ನರಸಿಂಹಾಚಾರ ಆರ್:*ಕರ್ನಾಟಕ ಕವಿಚರಿತೆ ಸಂ.1* ಬೆಂಗಳೂರು ಪ್ರೆಸ್,1924, ಪು.33.

11 ಶಾಸ್ತ್ರಿ ವೆಂಕಟಾಚಲ: *ಪಂಪ ಸಂಪುಟ(ಆದಿಪುರಾಣಂ, ವಿಕ್ರಮಾರ್ಜುನ ವಿಜಯಂ)*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006, ಪು.xxxviii.

12 *ವಿವಿಧ ವಿಮರ್ಶಾತ್ಮಕ ಲೇಖನಗಳ ಸಂಕಲನ*, ಪಂಪ ಪ್ರಕಟನಾಲಯ, ಲಕ್ಷ್ಮೇಶ್ವರ, 1951, ಪು,108.

13 ಅದೇ ಪು.181.

14 ಅದೇ ಪು.182.

ಎಂದು ವಿವರಿಸಲಾಗಿದೆ. ಅಲ್ಲಿ ಯುದ್ಧಾಂತ್ಯದಲ್ಲಿ ಧರ್ಮಮಹಾರಾಜನಿಗೆ ಪಟ್ಟಾಭಿಷೇಕವಾಗಿ ದ್ರೌಪದಿ ಪಟ್ಟದ ಮಹಾರಾಣಿಯಾದರೆ, ಇಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾಗಿ ಸುಭದ್ರೆ ಪಟ್ಟದ ಮಹಾರಾಣಿಯಾದಂತೆ ಪಂಪ ವಿವರಿಸಿದ್ದಾನೆ.[15]

ಪಂಪನು *ಪಂಪಭಾರತ*ವನ್ನು ಆರು ತಿಂಗಳಲ್ಲಿ ರಚಿಸಿದನೆಂದು ಹೇಳಿಕೊಂಡಿದ್ದಾನೆ. ಒಟ್ಟಿನಲ್ಲಿ ಇದು ಶ್ರೇಷ್ಠವಾದ ಕಾವ್ಯವಾಗಿದ್ದು ಇಂಥ ಮಹಾಕಾವ್ಯದ ರಚನೆ ಮತ್ತು ರಚನೆಗೆ ಪ್ರೇರೆಪಿಸಿದ ಪಂಪನಿಗೂ ಅರಿಕೇಸರಿ ರಾಜನಿಗೂ ಕನ್ನಡಿಗರು ಚಿರಋಣಿಗಳಾಗಿದ್ದಾರೆ.

**ರನ್ನ:** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೇ ಶತಮಾನಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಪಂಪ ಆದಿಪುರಾಣ ಬರೆದ ಕಾಲಕ್ಕೆ ರನ್ನ ಎಂಟು ವರ್ಷದ ಬಾಲಕನಾಗಿದ್ದ. ಚಾವುಂಡರಾಯನ ಆಶ್ರಯಕ್ಕೆ ಬಂದು ಜಿನಸೇನಾಚಾರ್ಯರ ಬಳಿ ಶಿಷ್ಯ ವೃತ್ತಿಯನ್ನು ಸ್ವೀಕರಿಸಿ ವಿದ್ಯಾಭ್ಯಾಸವನ್ನು ಮುಗಿಸುವ ಕಾಲಕ್ಕೆ ರಾಷ್ಟ್ರಕೂಟರ ಕೃಷ್ಣನ ಆಳ್ವಿಕೆ ಮುಗಿದು, ಗಂಗರಲ್ಲಿ ಮಾರಸಿಂಹ ಪ್ರಮುಖ ನಾಯಕನಾಗಿದ್ದನು. ಮಾರಸಿಂಹ ಸಲ್ಲೇಖನದಿಂದ ಮರಣ ಹೊಂದಿದಾಗ ಜೈನ ಧರ್ಮ ಅವನತಿಯ ಹಾದಿ ಹಿಡಿದಿದ್ದು ರನ್ನನಿಗೆ ಅರಿವಾಗಿರಬೇಕು. ಮಲ್ಲಪ್ಪ ಎಂಬ ವೀರನ ನೆರವಿನಿಂದ, ಮಲ್ಲಪ್ಪನ ಮಗಳಾದ ಅತ್ತಿಮಬ್ಬೆ ಮತ್ತು ಪಡೆವಲತೈಲರ ಭೇಟಿಯು ಅವರ ಆಶ್ರಯಕ್ಕೆ ಬರಲು ಕಾರಣವಾಯಿತು.[16] ರನ್ನ ಕನ್ನಡ ಸಾಹಿತ್ಯದ ರತ್ನತ್ರಯರಲ್ಲಿ ಒಬ್ಬ ಎಂದೂ, ಪಂಪ, ಪೊನ್ನ, ರನ್ನರನ್ನು **'ಜಿನಸಮಯ ದೀಪಕ' ರೆಂದು ಕರೆಯಲಾಗಿದೆ.**[17] ರನ್ನನು ತನ್ನ ವೈಯಕ್ತಿಕ ಮಾಹಿತಿಗಳನ್ನು ತನ್ನ ಕೃತಿಗಳಾದ *ಅಜಿತಪುರಾಣ* ಮತು *ಸಾಹಸ ಭೀಮ ವಿಜಯ*ಗಳಲ್ಲಿ ವಿವರಿಸಿದ್ದಾನೆ.

**ರನ್ನನ ಜೀವನ :** ಅಜಿತಸೇನಾಚಾರ್ಯ ಗುರುಗಳ ಪ್ರೀತಿಗೆ ಪಾತ್ರನಾದ ರನ್ನ ತನ್ನ ಜನನದ ಬಗ್ಗೆ ಶಕ ಸೌಮ್ಯ ಸಂವತ್ಸರ 871(ಕ್ರಿ.ಶ.949)ರಲ್ಲಿ ಬೆಳಗಲಿ 500 ದೇಶದ ಜಮಖಂಡಿ–70ಕ್ಕೆ ಸೇರಿದ ಮುಂದುವೋಳಲು(ಮುಧೋಳ) ಎಂಬ ಗ್ರಾಮದಲ್ಲಿ ವೈಶ್ಯ ಬಳೆಗಾರರ ಕುಲದ ಜಿನಭಕ್ತ ಜಿನವಲ್ಲಭೇಂದ್ರ ಮತ್ತು ಅಬ್ಬಲಬ್ಬೆ ದಂಪತಿಗಳಿಗೆ ದೃಢಬಾಹು ರೇಚಣ, ಮಾರಮಯ್ಯ ಮತ್ತು ರನ್ನ ಎಂಬ ನಾಲ್ಕು ಜನ ಮಕ್ಕಳು ಜನಿಸಿದರು. ರನ್ನನ ಪತ್ನಿಯರು ಜಕ್ಕಿ ಮತ್ತು ಶಾಂತಿ. ರಾಯ ಎಂಬ ಮಗ, ಅತ್ತಿಯಬ್ಬೆ ಮಗಳು ಇದ್ದರು. ರನ್ನನ ಬಾಲ್ಯದ ವಿದ್ಯಾಭ್ಯಾಸ ಜಮಖಂಡಿಯಲ್ಲಿದ್ದ ಜೈನಮಠದಲ್ಲಿ ನಡೆದಿರಬಹುದು. ಕನ್ನಡ ಪ್ರಾಕೃತದಲ್ಲಿ ಪರಿಣಿತಿಯನ್ನು ಪಡೆದು ಉಭಯ ವ್ಯಾಕರಣ ಪಂಡಿತನಾದನು. ಗಂಗರ ಆಸ್ಥಾನದಲ್ಲಿ ಮನ್ನಣೆ ದೊರೆತು ಚಾವುಂಡರಾಯನ ಸ್ನೇಹ ದೊರೆತಿತ್ತು ಎಂಬುದಕ್ಕೆ ಶ್ರವಣಬೆಳಗೊಳದ ಚಂದ್ರಗಿರಿ ಬಂಡೆಗಲ್ಲಿನಲ್ಲಿ ಕೆತ್ತಲಾದ 'ಶ್ರೀಚಾವುಣ್ಡಯ್ಯ' ಮತ್ತು 'ಶ್ರೀ ಕವಿರತ್ನ' ಎಂಬುದು ಇವರ ಸ್ನೇಹಕ್ಕೆ ಹಿಡಿದ ಕೈಗನ್ನಡಿಯಾಗಿದೆ. ರನ್ನನ ಪ್ರಥಮ ಸಾಹಿತ್ಯ ರಚನೆ ಎಂದರೆ ಚಂದ್ರಗಿರಿಯಲ್ಲಿ ಬಾಹುಬಲಿ ಬಸದಿಯ ಹೊರಗೋಡೆಯ ಬಳಿ ನಿಲ್ಲಿಸಿರುವ ಸಾಯಿಬ್ಬೆಯ ಸಚಿತ್ರ ಶಾಸನದಿಂದ. ಬಾಯಿಕ(ಬೋಯಿಗ)ನ ಮಗಳು ಸಾಯಿಬ್ಬೆಯ ಸಾಹಸಮಯ ವ್ಯಕ್ತಿತ್ವವನ್ನು ಚಿತ್ರಿಸುವ ಪುಟ್ಟ ಶಾಸನದಿಂದ 978–979ರ ಸುಮಾರಿಗೆ ಪ್ರಾರಂಭವಾದ ರನ್ನನ ಸಾಹಿತ್ಯ ರಚನೆ 1007–08 ರ ಲಕ್ಕುಂಡಿ ಶಾಸನದಿಂದ ಮುಕ್ತಾಯವಾಯಿತು. ಕ್ರಿ.ಶ.981–82ರಲ್ಲಿ ಚಾವುಂಡರಾಯ ನಿರ್ಮಿಸಿದ ಗೊಮ್ಮಟ ಮೂರ್ತಿಯ ಮಸ್ತಕಾಭಿಷೇಕಕ್ಕೆ ಅತ್ತಿಮಬ್ಬೆ ಬಂದಾಗ ರನ್ನನಿಗೆ ಪರಿಚಯವಾಯಿತು. ರನ್ನನು ಕ್ರಿ.ಶ.983–84 ರಲ್ಲಿ ಚಾವುಂಡರಾಯನನ್ನು ಮುಖ್ಯ ಭೂಮಿಕೆಯಲ್ಲಿ ಇಟ್ಟುಕೊಂಡು *ಪರಶುರಾಮ ಚರಿತೆ*ಯನ್ನು ರಚಿಸಿದನು. 984ರಲ್ಲಿ ಚಾವುಂಡರಾಯ ಮರಣಿಸಿದ್ದರಿಂದ ರನ್ನನು ಅತ್ತಿಮಬ್ಬೆಯ ಕರೆಗೆ ಓಗೊಟ್ಟು ಲಕ್ಕುಂಡಿಗೆ ಬಂದನು. ಆ ಸಮಯದಲ್ಲಿ ರಾಜಕೀಯ ಪರಿಸ್ಥಿತಿ ಅಸ್ಥಿರತೆಯಿಂದ ಕೂಡಿತ್ತು. ಆಗ ಅತ್ತಿಮಬ್ಬೆ ಮತ್ತು ನಾಗದೇವ ದಂಪತಿಗಳ ಆಶ್ರಯ ದೊರಕಿತು. ನಂತರದ ದಿನಗಳಲ್ಲಿ ರಾಷ್ಟ್ರಕೂಟರನ್ನು ಸೋಲಿಸಿ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ ಸ್ಥಾಪಿಸಿದ ತೈಲಪನ ದಿಗ್ವಜಯಗಳನ್ನು ತನ್ನ *ಚಕ್ರೇಶ್ವರ ಚರಿತ್ರೆ*ಯಲ್ಲಿ ಬರೆದು(990) ಕವಿ ಚಕ್ರವರ್ತಿಯಾದನು.[18] ರನ್ನನು ತನ್ನ ಮನೆಯ ಹಿರಿಯರಂತೆ ಜೈನ ಮತಾವಲಂಬಿಯಾಗಿದ್ದನು. ತನ್ನ ಮನೆತನವನ್ನು ವಣಿಕಳ್, ವೈಶ್ಯಧ್ವಜ ಎಂದು ಬಣ್ಣಿಸಿದ್ದು, ತನ್ನ ಮನೆತನ ಬಳೆಗಾರ ಕುಲವಾಗಿತ್ತು ಎಂದು ಹೇಳಿದ್ದಾನೆ. ರನ್ನನು ತನ್ನ ಊರಿಗೆ ಮರಳಿದಾಗ ಸವದತ್ತಿ ರಟ್ಟರ ರಾಜನಾದ ಕಾರ್ತ್ಯವೀರ್ಯನಿಂದ ಮೊದಲು ಗೌರವಿಸಲ್ಪಟ್ಟನು.[19]

ಅತ್ತಿಮಬ್ಬೆಯ ಪತಿ ನಾಗದೇವ ರಣಾಂಗಣದಲ್ಲಿ ವೀರಮರಣ ಹೊಂದಿದ ನಂತರ, ಅವನ ಸ್ಮರಣೆಗಾಗಿ ಪತ್ನಿ ಅತ್ತಿಮಬ್ಬೆ ಮತ್ತು ಮಗ ಅಣ್ಣಿಗದೇವನು 'ನಾಗೇಶ್ವರ ದೇಗುಲ'ವನ್ನು ನಿರ್ಮಿಸಿ ದತ್ತಿ ಬಿಟ್ಟರು ಎಂಬ ವಿಷಯವನ್ನು ತಿಳಿಸುವ ಶಾಸನವನ್ನು ರನ್ನ ರಚಿಸಿದ್ದಾನೆ. ಅಷ್ಟೆ ಅಲ್ಲದೆ ಅದರಲ್ಲಿರುವ ಒಂದು ಪದ್ಯವನ್ನು ತನ್ನ *ಅಜಿತಪುರಾಣ*ದಲ್ಲಿ ಸೇರಿಸಿದ್ದಾನೆ. ಶಿರೂರದಲ್ಲಿ ಒಂದು ಬಸದಿಯನ್ನು ಅತ್ತಿಮಬ್ಬೆ ಕಟ್ಟಿ ದತ್ತಿ ಬಿಟ್ಟ ವಿಷಯವನ್ನು ತಿಳಿಸುವ ಇನ್ನೊಂದು ಶಾಸನವನ್ನು ರನ್ನ ಕ್ರಿ. ಶ. 988ರಲ್ಲಿ ರಚಿಸಿ ಅದರಲ್ಲಿನ ಒಂದು ಪದ್ಯವನ್ನು ಕ್ರಿ. ಶ. 993ರಲ್ಲಿ ರಚಿಸಿದ *ಅಜಿತಪುರಾಣ*ದಲ್ಲಿ ಸೇರಿಸಿದ್ದಾನೆ. *ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ, ಅಜಿತ ಪುರಾಣ*ಗಳನ್ನು 'ರತ್ನತ್ರಯ' ವೆಂದು ತನ್ನನ್ನು ರತ್ನತ್ರಯಾಲಂಕೃತ' ನೆಂದೂ ಹೇಳಿಕೊಂಡಿದ್ದಾನೆ. ಸತ್ಯಾಶ್ರಯನ ಮಗ ಇರಿವಬೆಡಂಗ ಸತ್ಯಾಶ್ರಯನು ತಂದೆಯೊಂದಿಗಿನ ಯುದ್ಧಗಳಲ್ಲಿ ಪಾಲ್ಗೊಂಡ ಶೌರ್ಯದ ಕತೆಯನ್ನು ರನ್ನ ಪ್ರತ್ಯಕ್ಷವಾಗಿ ಕಂಡಿದ್ದನು. ಕಲ್ಯಾಣ ಚಾಲುಕ್ಯರ ಗೆಲುವುಗಳನ್ನು *'ಸಾಹಸಭೀಮ ವಿಜಯ'(ಗದಾಯುದ್ಧ)*

---

[15] ಅದೇ ಪು. Lii, Liii.

[16] ವೀರಣ್ಣ. ಸಿ: *ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ –1 ಪ್ರಾಚೀನ ಸಾಹಿತ್ಯ ರಾಜಸತ್ತೆಯ ವೈಭವದ ಕಾಲ,* ನವಕರ್ನಾಟಕ ಪಬ್ಲಿಕೇಶನ್ಸ ಪ್ರೈವೆಟ ಲಿಮಿಟೆಡ್,1986, ಪು.245, 246.

[17] ನಾಗರಾಜಯ್ಯ ಹಂಪ: *ರನ್ನ ಸಂಪುಟ, (ಅಜಿತ ತೀರ್ಥಂಕರ ಪುರಾಣತಿಲಕಂ, ಸಾಹಸಭೀಮ ವಿಜಯಂ),* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪು.xiii.

[18] *ರನ್ನ ಸಂಪುಟ: ಅಜಿತ ತೀರ್ಥಂಕರ ಪುರಾಣ ತಿಲಕಂ, ಸಾಹಸಭೀಮ ವಿಜಯ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪು. xvi.

[19] ಶೇಷಗಿರಿರಾವ್, ವಂಕತೇಯ್ಯ.ಮ.ಜಿ, ಮರಿಯಪ್ಪ ಭಟ್ಟ.ಎಂ: *ಕವಿಕಾವ್ಯ ಪರಂಪರೆ ರನ್ನ–4,* IBH ಪ್ರಕಾಶನ, ಬೆಂಗಳೂರು.1973, ಪು.4.

ಕಾವ್ಯವಾಗಿ (ಕ್ರಿ.ಶ. 1008ರಲ್ಲಿ) ರಚಿಸಿದನು. ಶಿಲಾಹಾರ ಅಪರಾದಿತ್ಯನನ್ನು ಪರಾಜಿತಗೊಳಿಸಿದ ಕಲ್ಯಾಣ ಚಾಲುಕ್ಯರ ಇರಿವಬೇಡಂಗ ಸತ್ಯಾಶ್ರಯನನ್ನು ಮಹಾಭಾರತದ ಭೀಮನೊಂದಿಗೆ ಹೋಲಿಸಿ '*ಗದಾಯುದ್ಧ*'ವನ್ನು ರಚಿಸಿದನು.

**ರನ್ನನ ಇತರ ಕೃತಿಗಳು:** *ಚಕ್ರೇಶ್ವರ ಚರಿತೆ* ಈ ಕೃತಿಯನ್ನು ಜೈನ ಪುರಾಣಗಳ ಪ್ರಥಮ ಚಕ್ರವರ್ತಿಯಾದ ಭರತನೊಂದಿಗೆ ಕಲ್ಯಾಣ ಚಾಲುಕ್ಯರ ಪ್ರಥಮ ಚಕ್ರವರ್ತಿ ಅಹವಮಲ್ಲ ತೈಲಪ(977–97) ನನ್ನು ಹೋಲಿಸಿ ಬರೆದಿದ್ದಾನೆ. ಹಾಗೆಯೇ *ಪರಶುರಾಮ ಚರಿತೆ*ಯಲ್ಲಿ ಗಂಗರ ಪರಮವೀರ ಸೇನಾನಿ ಸಮರ ಪರಶುರಾಮ ಬಿರುದನ್ನು ಹೊಂದಿದ್ದ *ಚಾವುಂಡರಾನ ಚರಿತ್ರೆ*ಯನ್ನು ಚಿತ್ರಿಸಿದ್ದಾನೆ.[20] *ಅಜಿತಪುರಾಣ*ದಲ್ಲಿ ಎರಡನೇ ತೀರ್ಥಂಕರನಾದ ಅಜಿತನಾಥ ಹಾಗೂ ಎರಡನೆ ಚಕ್ರವರ್ತಿಯಾದ ಸಗರಸನ ಕಥೆಯಿದೆ. ಜೈನ ಪುರಾಣಗಳಲ್ಲಿ ಬರುವ ಹಿಂದಿನ ಭವಾವಳಿಗಳ ತೊಡಕಿಲ್ಲದೆ ಜನ್ಮ ಕಲ್ಯಾಣಕ ಸೇರಿ ಪಂಚ ಕಲ್ಯಾಣಕಗಳು ಸೇರಿ ನವರಸ ವರ್ಣನೆಗಳು ಈ ಕಾವ್ಯದಲ್ಲಿವೆ. ಜೈನಶಾಸ್ತ್ರ, ನಾಟ್ಯಶಾಸ್ತ್ರ, ಅಲಂಕಾರ ಶಾಸ್ತ್ರಗಳನ್ನು ಇದರಲ್ಲಿ ಬಣ್ಣಿಸಲಾಗಿದೆ.[21]

ಹೀಗೆ ಕನ್ನಡ ಕಾವ್ಯ ಪರಂಪರೆಯಲ್ಲಿ ರನ್ನನಿಗೆ ವಿಶೇಷ ಸ್ಥಾನವಿದ್ದು, ಹತ್ತನೇ ಶತಮಾನದ ಶಕ್ತಿಕವಿ ರನ್ನನು ತನ್ನ ಕೃತಿಗಳಲ್ಲಿ ಸತ್ಯಾಶ್ರಯನ ವೀರಗುಣ, ಅತ್ತಿಮಬ್ಬೆಯ ದಾನಗುಣಗಳನ್ನು ಜನಮಾನಸದಲ್ಲಿ ಉಳಿಯುವಂತೆ ಮಾಡಿದ್ದಾನೆ.

**ಇಮ್ಮಡಿ ಗುಣವರ್ಮ :** ಸವದತ್ತಿ ರಟ್ಟ ರಾಜವಂಶದ ನಾಲ್ಕನೇ ಕಾರ್ತ್ಯವೀರ್ಯನ ನಾಡಪ್ರಭು ಆಗಿದ್ದ ಶಾಂತಿವರ್ಮನ ಆಸ್ಥಾನದಲ್ಲಿ ಇಮ್ಮಡಿ ಗುಣವರ್ಮನು ಇದ್ದನು. ಶಾಂತಿವರ್ಮನು ಗುಣವರ್ಮನಿಗೆ ಜಿನಕಥೆಯನ್ನು ರಚಿಸುವಂತೆ ಪ್ರೇರೇಪಿಸಿದನು ಆದ್ದರಿಂದ ಇಮ್ಮಡಿ ಗುಣವರ್ಮನು ಕ್ರಿ. ಶ. 1215ರಲ್ಲಿ ಒಂಬತ್ತನೇ ತೀರ್ಥಂಕರನಾದ ಪುಷ್ಪದಂತನ ಕುರಿತು'*ಪುಷ್ಪದಂತ ಪುರಾಣ*' ವನ್ನು ರಚಿಸಿದನು. ಇದರಲ್ಲಿ ತನ್ನ ಗುರು ಮುನಿಚಂದ್ರ ಪಂಡಿತ, ಆಶ್ರಯದಾತ ಶಾಂತಿವರ್ಮನ ಬಿರುದುಗಳು, ಕುಟುಂಬ, ಪುಷ್ಪದಂತ ತೀರ್ಥಂಕರನ ಜೀವನದ ಬಗ್ಗೆ ಬರೆದಿದ್ದಾನೆ. ಅದೇ ರೀತಿ '*ಚಂದ್ರನಾಥಾಷ್ಟಕ*' ಎಂಬ ಒಂಭತ್ತು ಪದ್ಯಗಳ ಸ್ತುತಿಮಾಲೆಯನ್ನು ರಚಿಸಿದ್ದಾನೆ. ಇದರಲ್ಲಿ ಕೊಲ್ಲಾಪುರದ ತ್ರಿಭುವನತಿಲಕ ಜಿನಾಲಯದ ಕುರಿತು ಉಲ್ಲೇಖಿಸಿದ್ದಾನೆ. ಇಲ್ಲಿ ಪ್ರತಿ ಪದ್ಯ 'ಚಂದ್ರನಾಥಾ' ಎಂದು ಕೊನೆಗೊಳ್ಳುತ್ತದೆ.[22] ಈತನು ಜನ್ನನ ಸಮಕಾಲೀನನಾಗಿರಬೇಕು ಏಕೆಂದರೆ ಪೂರ್ವಕವಿಗಳನ್ನು ಸ್ಮರಿಸುವಾಗ ಜನ್ನನನ್ನು ಸ್ಮರಿಸಿದ್ದಾನೆ.[23] ಗುಣವರ್ಮನು ಕುಹೂಂಡಿ (ಬೆಳಗಾವಿ ಪ್ರದೇಶ)ಯ ನಿವಾಸಿಯಾಗಿರಬೇಕು ಎಂದು ತಿಳಿದುಬರುತ್ತದೆ.[24]

**ಮುನಿಚಂದ್ರ :** ಈತನೂ ಜೈನ ಕವಿಯಾಗಿದ್ದು ಇಮ್ಮಡಿ ಗುಣವರ್ಮನ ಗುರುವಾಗಿದ್ದನು. *ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿ*ನಲ್ಲಿ ಪ್ರಕಟವಾಗಿರುವ ಶಕ 1151 ರಲ್ಲಿ(1224) ರಚಿಸಲ್ಪಟ್ಟ ಸವದತ್ತಿ ಶಾಸನದಿಂದ (*vol.x.260*) ಈತನು ರಟ್ಟರ ರಾಜ ಕಾರ್ತ್ಯವೀರ ಮತ್ತು ಅವನ ಮಗ ಲಕ್ಷ್ಮೀದೇವನಿಗೆ ಗುರುವಾಗಿದ್ದನು. ಮಹಾಬಲ ಕವಿ(1254) ಮುನಿಚಂದ್ರನನ್ನು ತನ್ನ ನೇಮಿನಾಥ ಪುರಾಣದಲ್ಲಿ "ಅಖಿಳ ತರ್ಕ ತಂತ್ರ ಮಂತ್ರ ವ್ಯಾಕರಣ ಭರತಕಾವ್ಯನಾಟಕ ಪ್ರವೀಣ' ಎಂದು ಪ್ರಶಂಶಿಸಿದ್ದಾನೆ.[25]

**ಮಾದಿರಾಜ :** ನವಿಲಗುಂದ (ನವಲಗುಂದ)ದ ಜೈನ ಕವಿಯಾಗಿದ್ದ ಮಾದಿರಾಜನು ಹದಿನಾಲ್ಕನೇ ಶತಮಾನದಲ್ಲಿ(ಕ್ರಿ.ಶ.1300) ಚಾಮ ಮತ್ತು ಮಹಾದೇವಿಯರಿಗೆ ಮಗನಾಗಿ ಜನಿಸಿದನು. ಇಮ್ಮಡಿ ಗುಣವರ್ಮನ ಪುಷ್ಪದಂತ ಪುರಾಣದ (ನಂತರದ ಪ್ರತಿ) ಕೊನೆಯಲ್ಲಿ ದಾಖಲಿಸಲಾದ ವ್ರತಗಳಲ್ಲಿ ಮಾದಿರಾಜನ ಬಗ್ಗೆ ಕೆಲವು ವಿವರಗಳು ಕಂಡುಬರುತ್ತವೆ.[26]

ಧಾರವಾಡ ಜಿಲ್ಲೆಯ ಕಳಸದಲ್ಲಿರುವ ಶಾಸನವನ್ನು(*Ephigraphia indica, XIII, 327*) ತಾನೇ ರಚಿಸಿದ್ದಾಗಿ ಆ ಶಾಸನದ ಕೊನೆಯಲ್ಲಿ ಕವಿರಾಜರಾಜ ವಿಬುಧ। ಪ್ರವರಂ ಶ್ರೀಕಾಡಿಯೂರನಲ್ಲಿಯ ಕಮಲೋ। ಎಂಬ ಪದ್ಯದಿಂದ ತಿಳಿಯುತ್ತದೆ. ಈ ಶಾಸನವು ರಾಷ್ಟ್ರಕೂಟ ಅರಸ ಗೊಜ್ಜಿಗದೇವನ (4ನೆ ಗೊವಿಂದ) ಕಾಲದಲ್ಲಿ ಬರೆಯಲ್ಪಟ್ಟಿದೆ.[27]

**ಚಿಕ್ಕಮಲ್ಲಿಶೆಟ್ಟಿ :** ಚಿಕ್ಕಮಲ್ಲಿಶೆಟ್ಟಿಯು 24 ಅಧ್ಯಾಯಗಳು, 2215 ಸಾಂಗತ್ಯ ಪದ್ಯಗಳನ್ನು ಒಳಗೊಂಡಿರುವ *ಸಮ್ಯಕ್ತ್ವ*ಕೌಮುದಿ ಎಂಬ ಕೃತಿಯ ಲೇಖಕ ಎಂದು ಎಮ್. ಎಮ್. ಕಲ್ಬುರ್ಗಿಯವರು ಹೇಳಿದ್ದಾರೆ. ಆಳ್ನಾವರದಲ್ಲಿ ದೊರೆತ ಶಾಸನದಲ್ಲಿ (1505) ಹುಬ್ಬಳ್ಳಿಯ ಸಿದ್ಧನಮಿಖನ

---

[20] *ರನ್ನ ಸಂಪುಟ,(ಅಜಿತ ತೀರ್ಥಂಕರ ಪುರಾಣ ತಿಲಕಂ, ಸಾಹಸಭೀಮ ವಿಜಯ*), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006,ಪು. **xviii.**

[21] *ವಿಜಾಪುರ ಗೆಜೆಟಿಯರ್,* ಪು.836,837.

[22] ಹಂಜೆ. ಸಂಜಯ: *ಗೋಕಾಕ ಪರಿಸರದಲ್ಲಿ ಜೈನಧರ್ಮ*, ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ, 2016, ಪು.41–42

[23] ಗಾಳಿ ಶಿವಾನಂದ, ಭದ್ರನ್ ಹೆಗಡೆ ಶ್ರೀಧರ: *ಜಿನದೃಷ್ಟಿ*, ಸುಂದರ ಪುಸ್ತಕ ಪ್ರಕಾಶನಾಲಯ, 2004, ಪು.90.

[24] ನರಸಿಂಹಾಚಾರ ಆರ್: *ಕರ್ನಾಟಕ ಕವಿಚರಿತೆ ಸಂಪುಟ I*, ಬೆಂಗಳೂರು ಪ್ರೆಸ್, 1924, ಪು.349.

[25] ಅದೇ.

[26] ಅಜಿತ ಪ್ರಸಾದ: *ಜೈನಿಸಂ ಇನ್ ಧಾರವಾಡ ರಿಜಿನ–ಅ ಕಲ್ಚರಲ್ ಸ್ಟಡಿ*, ಸಂಶೋಧನಾ ಪ್ರಬಂಧ, *Ancient Indian History and Epigraphy*, 1996, ಪು, 117.

[27] *ಕರ್ನಾಟಕ ಕವಿಚರಿತೆ ಸಂಪುಟ I*, ಬೆಂಗಳೂರು ಪ್ರೆಸ್,1924,ಪು.29.

ಮಗನಾದ ಚಿಕ್ಕಮಲ್ಲಿಶೆಟ್ಟಿಯು 21 ದಿನಗಳ ಸಲ್ಲೇಖನ ವ್ರತದಿಂದ ಸಮಾಧಿಮರಣ ಹೊಂದಿದನೆಂದು ವಿವರವಿದೆ.[28] *ಸಮ್ಯಕ್ತ್ವಕೌಮುದಿ* ಕಥಾ ಪರಂಪರೆಯನ್ನು ಕನ್ನಡದಲ್ಲಿ ಪ್ರಥಮವಾಗಿ ಪರಿಚಯಿಸಿದ ಕಾವ್ಯವಾಗಿದೆ. ಇದರಲ್ಲಿ ಆಳ್ವಾವರದ 'ಮತ್ತಿಯ ಜಿನಚಂದ್ರ'ನನ್ನು ಸ್ಮರಿಸಲಾಗಿದೆ.[29]

**ಮಲ್ಲಿಸೇನ :** ಮಲ್ಲಿಸೇನಸೂರಿಯು ಅಜಿತಸೇನ ಸನ್ಯಾಸಿಗಳ ವಂಶಕ್ಕೆ ಸೇರಿದ್ದು, ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದ ಪ್ರಸಿದ್ಧ ವಿದ್ವಾಂಸನಾಗಿದ್ದನು. ಧಾರವಾಡ ಜಿಲ್ಲೆಯ ಮುಳಗುಂದ ಜೈನಮಠದ ಮುಖ್ಯಸ್ಥನಾಗಿದ್ದನು. ಈತನ ಮಹಾಪುರಾಣದಲ್ಲಿ ಮುಳಗುಂದವನ್ನು ಜೈನಧರ್ಮದ ಪವಿತ್ರ ಕೇಂದ್ರ ಎಂದು ಉಲ್ಲೇಖಿಸಲಾಗಿದೆ.[30]

**ನೇಮಿಚಂದ್ರ :** ಜೈನ ಕವಿಯಾಗಿದ್ದು ಸವದತ್ತಿ ರಟ್ಟರ ಲಕ್ಷ್ಮಣರಾಜ ಮತ್ತು ಹೊಯ್ಸಳರ ವೀರಬಲ್ಲಾಳ ಇಬ್ಬರ ಆಸ್ಥಾನದಲ್ಲೂ ಪ್ರಸಿದ್ಧನಾಗಿದ್ದನೆಂದು ತಿಳಿದುಬರುತ್ತದೆ. ನೇಮಿಚಂದ್ರನಿಗೆ ಆಂಗಿಕ ನೇಮಿ ಎಂದು ಹೆಸರಿತ್ತು. ಇವನ ಪೂರ್ವ ಕವಿಗಳಾದ ಸಮಂತಭದ್ರ, ಅಕಳಂಕ, ಪೂಜ್ಯಪಾದರನ್ನು ಸ್ಮರಿಸಿದ್ದಾನೆ. ನೇಮಿಚಂದ್ರನನ್ನು ಜನ್ನ, ಪಾರ್ಶ್ವಪಂಡಿತ, ಮಂಗರಸ, ಬಾಹುಬಲಿ ಮುಂತಾದ ಕವಿಗಳು ಹೊಗಳಿದ್ದಾರೆ.[31] ನೇಮಿಚಂದ್ರನು *ಲೀಲಾವತಿ* ಮತ್ತು *ನೇಮಿನಾಥ ಪುರಾಣ*ಗಳನ್ನು ರಚಿಸಿದ್ದಾನೆ. *ಲೀಲಾವತಿ*ಯನ್ನು ರಟ್ಟರಾಜ ಲಕ್ಷ್ಮಣನಿಗಾಗಿ ಬರೆದನು. *ನೇಮಿನಾಥ ಪುರಾಣ*ವನ್ನು ವೀರಬಲ್ಲಾಳನ ಪ್ರಧಾನಿ ಸೆಜ್ಜೆವಳ್ಳಿ ಪದ್ಮನಾಭನಿಗಾಗಿ ಬರೆದಿದ್ದಾಗಿ ಹೇಳಿದ್ದಾನೆ.[32] ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೊಸೂರು ಶಾಸನವನ್ನು ಕ್ರಿ. ಶ. 11ನೇ ಶತಮಾನದಲ್ಲಿ ಅಗ್ಗಳದೇವನ ಮಗನಾದ ಲಕ್ಷ್ಮಣನು ರಚಿಸಿದ್ದಾಗಿ ಉಲ್ಲೇಖಿಸಿದೆ. ಇದೇ ಶಾಸನದ ಎರಡನೇ ಪದ್ಯದಲ್ಲಿ ನೇಮಿಚಂದ್ರರನ್ನು 'ತ್ರೈವಿದ್ಯಾವಿಧ್ಯಾಧರಂ' ಎಂದು ಹೊಗಳಿದೆ.[33]

**ನಾಗಚಂದ್ರ :** ಕರ್ನಾಟಕದ ಐತಿಹಾಸಿಕ, ಸಾಂಸ್ಕೃತಿಕ ರಾಜಧಾನಿ ವಿಜಯಪುರ ಜಿಲ್ಲೆಯ ಇಂದಿನ ಇಂಡಿ ತಾಲೂಕಿನ ತರ್ದವಾಡಿ–1000 ಅಂದರೆ ತರ್ದವಾಡಿ ನಾಡಿನ ಸಾವಿರ ಹಳ್ಳಿಗಳಲ್ಲಿ ವಿಜಯಪುರ ಒಂದು ಹಳ್ಳಿಯಾಗಿತ್ತು. ಈ ವಿಜಯಪುರ ಪ್ರದೇಶವು ಪ್ರಸಿದ್ಧ ಮುನಿಗಳು, ಕವಿಗಳು, ಸಾಹಿತಿಗಳು, ವಿದ್ವಾಂಸರಿಗೆ ಜನ್ಮ ನೀಡಿದ ಪುಣ್ಯಭೂಮಿಯಾಗಿದೆ. ಈ ಜಿಲ್ಲೆಯ ಪ್ರಾಚೀನ ಕವಿಗಳಲ್ಲಿ 'ಅಭಿನವ ಪಂಪ' ಎಂಬ ಬಿರುದಾಂಕಿತ ನಾಗಚಂದ್ರ ಮತ್ತು 'ಉಭಯ ಕವಿತಾ ವಿಶಾರದ' ಎಂಬ ಬಿರುದಾಂಕಿತ ಅಗ್ಗಳ ಪ್ರಮುಖರಾಗಿದ್ದಾರೆ.

ನಾಗಚಂದ್ರ ತನ್ನ ತಂದೆ ತಾಯಿ ಜನ್ಮಸ್ಥಳ, ವೃತ್ತಿ ಕಾಲಮಾನ, ಸಂಬಂಧಿಕರ ಬಗ್ಗೆ ತನ್ನ ಕೃತಿಗಳಲ್ಲಿ ಏನು ತಿಳಿಸಿಲ್ಲ. 'ಮೂಲಸಂಘದ ದೇಸೀಗಣದ ಪೊಸ್ತಕಗಚ್ಛದ ಕುಂದಕುಂದಾನ್ವಯ ಪರಂಪರೆಯ ಬಾಲಚಂದ್ರಮುನಿ ನಾಗಚಂದ್ರನ ವಿದ್ಯಾಗುರುಗಳಾಗಿದ್ದರು. ಇವರನ್ನು ತನ್ನ ಕೃತಿ *ಮಲ್ಲಿನಾಥ ಪುರಾಣ*ದಲ್ಲಿ ಉಲ್ಲೇಖಿಸಿದ್ದಾನೆ.[34]

ನಾಗಚಂದ್ರನ ವೈಯಕ್ತಿಕ ವಿವರಗಳು ಕಣ್ಣೂರ ಶಾಸನ, ಬಾಬಾನಗರ ಶಾಸನ, ಹಂಪ ನಾಗರಾಜಯ್ಯ ಅವರಿಂದ ಕಾಲ ಮಕ್ಕಳು, ಮೊಮ್ಮಕ್ಕಳ ಬಗ್ಗೆ ತಿಳಿಯುತ್ತದೆ. ಸೀತಾರಾಮ ಜಾಗಿರದಾರರ '*ಸಮಾಧಿ ಶತಕ*'ದಲ್ಲಿ ನಾಗಚಂದ್ರನಿಗೆ ಶಾಂತಿ, ದೇವಣ್ಣ ಎಂಬ ಮಕ್ಕಳು, ನಾಗಾರ್ಯ, ನಾಗಚಂದ್ರ, ಕೂಚಿರಾಜ ಎಂಬ ಮೂರು ಮೊಮ್ಮಕ್ಕಳು, ಕಪ್ಪಣನೆಂಬ ಮರಿಮೊಮ್ಮಗನಿದ್ದನೆಂದು ತಿಳಿದುಬಂದಿದೆ. ಜಾಗಿರದಾರರ ಪ್ರಕಾರ ಬ್ರಹ್ಮಶಿವನ ತಂದೆ ಸಿಂಗಿರಾಜ ನಾಗಚಂದ್ರನ ಮತ್ತೊಬ್ಬ ಮಗನೆಂದೂ ತಿಳಿದುಬರುತ್ತದೆ.[35] ನಾಗಚಂದ್ರನಿಂದ ರಚನೆಯಾದ *ರಾಮಚಂದ್ರಚರಿತ ಪುರಾಣ* ಕನ್ನಡದ ಉಪಲಬ್ಧ ಮೊದಲ ಜೈನ ರಾಮಾಯಣವಾಗಿದೆ. ಈ ಕೃತಿಯ ಒಂದು ಪದ್ಯದಲ್ಲಿ ಮೇಘಚಂದ್ರ ತ್ರೈವಿದ್ಯನೆಂಬ ಒಬ್ಬ ಜೈನ ಗುರುವನ್ನು ಸ್ತುತಿಸಿದ್ದಾನೆ. ಇದೇ ಜೈನ ಗುರು ಶಾಸನದಲ್ಲೂ ಉಲ್ಲೇಖಿತನಾಗಿದ್ದಾನೆ. ವಿಜಯಪುರದ ಮೂಸಿಯಂನಲ್ಲಿರುವ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕಾಲದ (1076–1126) ಶಾಸನವನ್ನು ನಾಗಚಂದ್ರನೇ ರಚಿಸಿದ್ದಾನೆ ಎನ್ನುವುದಕ್ಕೆ *ಪಂಪ ರಾಮಾಯಣ*ದ ಕೆಲವು ಪದ್ಯಗಳು ಮತ್ತು ಕೆಲವು ಶಬ್ದಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.[36]

---

[28] ಅದೇ ಪು.118.

[29] *ಅವಿಭಜಿತ ಧಾರವಾಡ ಜಿಲ್ಲೆಯ ಜೈನ ಇತಿಹಾಸ ಮತ್ತು ಪುರಾತತ್ವ*, ಅರಿಹಂತ ಪ್ರಕಾಶನ, ಧಾರವಾಡ, 2025, ಪು.283.

[30] *ಜೈನಿಸಂ ಇನ್ ಧಾರವಾಡ ರಿಜಿನ–ಅ ಕಲ್ಚರಲ್ ಸ್ಟಡಿ*, ಸಂಶೋಧನಾ ಪ್ರಬಂಧ, *Ancient Indian History and Epigraphy*, 1996, ಪು.118.

[31] *ಕರ್ನಾಟಕ ಕವಿಚರಿತೆ ಸಂಪುಟ 1*, ಬೆಂಗಳೂರು ಪ್ರೆಸ್, 1924, ಪು.ಸಂ. 255,256)

[32] ಅದೇ ಪುಟ.

[33] *ಕರ್ನಾಟಕ ಜೈನ ಶಾಸನಗಳು ಸಂಪುಟ–4*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,2019, ಪು.205.

[34] ಚಿದಾನಂದ ಮೂರ್ತಿ,ಎಮ್: *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.1150) ಚಿದಾನಂದ ಸಮಗ್ರ ಸಂಪುಟ*–1, ಸ್ವಪ್ನ ಬುಕ್ ಹೌಸ್ ಗಾಂಧಿನಗರ, 1996, ಪು.11.

[35] ಮುಗಳಿ.ರಂ. *ಶ್ರೀ: ಕನ್ನಡ ಸಾಹಿತ್ಯ ಚರಿತ್ರೆ, ಗೀತಾ* ಬುಕ್‌ಹೌಸ್, 1993, ಪು.9,10.

[36] ನರಸಿಂಹಾಚಾರ: ಪು. ಸಂ. xli.

**ನಾಗಚಂದ್ರನ ಕೃತಿಗಳು :** *ಮಲ್ಲಿನಾಥ ಪುರಾಣ*, ಇದು ನಾಗಚಂದ್ರನ ಪ್ರಥಮ ಧಾರ್ಮಿಕ ಕಾವ್ಯವಾಗಿದೆ. ಹತ್ತೊಂಬತ್ತನೆಯ ತೀರ್ಥಂಕರ ಮಲ್ಲಿನಾಥನ ಕುರಿತಾದ ಕೃತಿಯಾಗಿದೆ. *ಮಲ್ಲಿನಾಥ ಪುರಾಣವು* ಹದಿನಾಲ್ಕು ಆಶ್ವಾಸಗಳನ್ನು ಹೊಂದಿದೆ.[37] *ರಾಮಚಂದ್ರಚರಿತ ಪುರಾಣವು* ರಾಮಾಯಣದ ಕತೆಯನ್ನು ಒಳಗೊಂಡಿದೆ. ನಾಗಚಂದ್ರನ ಬಿರುದು ಅಭಿನವ ಪಂಪನಾಗಿದ್ದರಿಂದ ಅವನು ಈ ಕೃತಿಯನ್ನು ರಚಿಸಿದ್ದರಿಂದ ಇದಕ್ಕೆ ಪಂಪ ರಾಮಾಯಣವೆಂದು ಕರೆಯಲಾಗಿದೆ. ಇದರಲ್ಲಿ ಮುನಿಸುವ್ರತ ತೀರ್ಥಂಕರ ಕಾಲದ ಬಲದೇವ, ವಾಸುದೇವ, ಪ್ರತಿವಾಸುದೇವರಾದ ರಾಮ–ಲಕ್ಷ್ಮಣ ಮತ್ತು ರಾವಣನ ಚರಿತ್ರೆಯನ್ನು ಒಳಗೊಂಡಿದೆ. ಜೈನ ನಂಬಿಕೆಯ ಪ್ರಕಾರ ರಾಮನು 8ನೆಯ ಬಲದೇವ, ಚರಮ ದೇಹದಾರಿ, ಅಹಿಂಸಾ ವೃತಿ ಮತ್ತು ಕಾರಣಪುರುಷನಾಗಿದ್ದಾನೆ.[38] ಲವ ಕುಶರು ಯುದ್ಧಸಾರಿದ ಪ್ರಸಂಗ ತಂದೆ ಮಕ್ಕಳ ಸಮಾಗಮ, ಸೀತೆಯು ಅಗ್ನಿಕುಂಡ ಪ್ರವೇಶದಿಂದ ಪರಿಶುದ್ಧೆಯಾಗಿ ಹೊರಹೊಮ್ಮಿದಳು. ಆಗ ರಾಮ ಅವಳಿಗೆ ಸಾಮ್ರಾಜ್ಞಿಯಾಗುವಂತೆ ಕೇಳಿದಾಗ ಅವಳು ತಪಸ್ಸಿಗೆ ತೆರಳುವುದಾಗಿ ಹೇಳಿ ಪ್ರಥುಮತಿ ಕಂತಿಯರ ಸಮ್ಮುಖದಲ್ಲಿ ತಪಸ್ಸನ್ನು ಕೈಗೊಳ್ಳುತ್ತಾಳೆ, ರಾಮನು ಜೈನದೀಕ್ಷೆ(ದಿಗಂಬರ) ತೆಗೆದುಕೊಂಡು ತಪಸ್ಸು ಮಾಡಿ ನಿರ್ವಾಣ ಹೊಂದುತ್ತಾನೆ ಎಂಬ ಕತೆಯನ್ನು ಹೊಂದಿದೆ.[39]

**ಹಿರಣ್ಯ ಗರ್ಭ ಕವಿ :** ಧಾರವಾಡ ಪ್ರಾಂತ್ಯದ ಜೈನ ಕವಿಯಾದ ಹಿರಣ್ಯಗರ್ಭ ಕವಿಯು ಸುಮಾರು 1860ರ ಕಾಲದವನು. ಈತನ *ಸರಸ್ವತಿ ಪ್ರಬಂಧ* ಕೃತಿಯಲ್ಲಿ ಪದ್ಮಪ್ರಭು ಸ್ತುತಿಯಿದೆ ನಂತರದಲ್ಲಿ ಸಿದ್ಧರು, ವೃಷಭ, ಸೇನ, ಗೌತಮಿ, ಸರಸ್ವತಿ, ಸಮಂತಭದ್ರ, ಪೂಜ್ಯಪಾದ, ಅಕಲಂಕರನ್ನು ಸ್ಮರಿಸಿದ್ದಾನೆ.[40]

**ಅಗ್ಗಳ :** ವಿಜಯಪುರ ಜಿಲ್ಲೆಯ ಇಂಗಳೇಶ್ವರದ ಅಗ್ಗಳನು ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಕೊಂಡಕುಂದ ವಂಶದಲ್ಲಿ ಜನಿಸಿದನು. ಇವನ ತಂದೆ ಶಾಂತೀಶ, ತಾಯಿ ಪೋಚಾಂಬಿಕೆ, ಗುರು ಶ್ರುತಕೀರ್ತಿ ತ್ರೈವಿದ್ಯ.[41] ಅಗ್ಗಳನು ಕ್ರಿ. ಶ. ಸು. 11ನೇ ಶತಮಾನದ ಪೂರ್ವಾರ್ಧದಲ್ಲಿ ಇಂದ್ರನ ಅರಮನೆಯಂತಾ ಅರಮನೆಯನ್ನು ಇಂಗಳೇಶ್ವರದಲ್ಲಿ 1008 ಭಗವಾನ ಶ್ರೀ ಮಲ್ಲಿನಾಥ ತೀರ್ಥಂಕರರ ಕಲ್ಲಿನ ಬಸದಿಯನ್ನು ನಿರ್ಮಿಸಿದ್ದಾನೆ.[42] ಕ್ರಿ. ಶ. 10ನೆಯ ಶತಮಾನಕ್ಕೆ ಸೇರಿದ ಶ್ರವಣಬೆಳಗೊಳ ಶಾಸನದಲ್ಲಿ (ಶಾಸನ ಸಂಖ್ಯೆ 147) ಅನ್ದಮಾರಯ್ಯನು ಪೆರ್ಗ್ಗಡೆ ರೇತಯ್ಯನ ಸೇವಕ ಸಂಕಯ್ಯನೊಂದಿಗೆ ಅಗ್ಗಳ ದೇವರನ್ನು ನೋಡಬೇಕೆಂದು ಮನಸ್ಸಿನಲ್ಲಿ ಆಶಿಸಿ ಬೆಳ್ಗೊಳದಲ್ಲಿ ತಂಗಿದ್ದನು ಎಂದಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ಹೊಸೂರಿನ ಗ್ರಾಮದಲ್ಲಿರುವ ಶಾಸನ (ಬೆಳಗಾವಿ ಜಿಲ್ಲೆಯ ಜೈನ ಶಾಸನ. 64) ದಲ್ಲಿ ಲಿಪಿ ಆಧಾರದಿಂದ ಇದು ಕ್ರಿ. ಶ. ಸು. 11ನೇ ಶತಮಾನದ್ದೆಂದು ತಿಳಿಯಲಾಗಿದೆ. ಈ ಶಾಸನವು ವಿದ್ವಾಂಸರಿಂದ ಹೊಗಳಿಸಿಕೊಳ್ಳುವ, ದೇವರಿಗೆ ಪ್ರಿಯವಾದ ಅಗ್ಗಳದೇವನ ಮಗನಾದ ಲಕ್ಷ್ಮಣನು ಈ ಜಿನಶಾಸನವನ್ನು ರಚಿಸಿದ್ದಾಗಿ ಉಲ್ಲೇಖಿಸಿದೆ. ಎರಡನೆಯ ಪದ್ಯದಲ್ಲಿ ನೇಮಿಚಂದ್ರನನ್ನು ತ್ರೈವಿದ್ಯಾವಿಧ್ಯಾಧರಂ ಎಂದು ಹೊಗಳಿದೆ. ಶ್ರುತಕೀರ್ತಿದೇವನ ಶಿಷ್ಯನಾದ ಅಗ್ಗಳನಿಂದ *ಚಂದ್ರಪ್ರಭ ಪುರಾಣವನ್ನು* ಬರೆಸಿದನೆಂದು ಉಲ್ಲೇಖವಿದೆ.[43] ಅಗ್ಗಳನ ಕೃತಿಗೆ '*ಅಗ್ಗಳಪುರಾಣ*' ಎಂದು ಕರೆದಿದ್ದಾರೆ.[44] ಅಗ್ಗಳನಿಗೆ ಭಾರತಿಭಾಳನೇತ್ರ, ಸಾಹಿತ್ಯವಿನೋದ ಎಂಬ ಬಿರುದುಗಳಿದ್ದವು.[45]

**ಪಾರ್ಶ್ವ ಪಂಡಿತ :** ಈತನು ಸವದತ್ತಿ ರಟ್ಟರ ನಾಲ್ಕನೆ ಕಾರ್ತ್ಯವೀರನ ಆಸ್ಥಾನದ ಜೈನ ಕವಿಯಾಗಿದ್ದ ಪಾರ್ಶ್ವ ಪಂಡಿತನು ಕ್ರಿ. ಶ. 1222ರಲ್ಲಿ 23ನೇ ತೀರ್ಥಂಕರ ಪಾರ್ಶ್ವನಾಥನನ್ನು ಕುರಿತು *ಪಾರ್ಶ್ವನಾಥ ಪುರಾಣವನ್ನು* ಕನ್ನಡದಲ್ಲಿ ರಚಿಸಿದ ಮೊದಲ ಕವಿಯಾಗಿದ್ದಾನೆ.[46] ತಂದೆ ಲೋಕನಾಯಕ, ತಾಯಿ ಕಾಮಿಯಕ್ಕ, ಅಣ್ಣ ನಾಗಣ, ಗುರು ಶ್ರೀಕುಮುದೇಂದು ಮುನಿಗಳಾಗಿದ್ದಾರೆ. ತನ್ನ ಕೃತಿಯಲ್ಲಿ ಕಾರ್ತ್ಯವೀರನ ಮಗ ಲಕ್ಷ್ಮಣರಾಜನ ಬಗ್ಗೆ ಬರೆದಿದ್ದಾನೆ.[47] ತನ್ನ ಆಶ್ರಯದಾತನ ಕೌಟುಂಬಿಕ ವಿವರಣೆಗಳನ್ನು, ಪಾರ್ಶ್ವನಾಥ ತೀರ್ಥಂಕರನ ಜೀವನ ಚರಿತ್ರೆ ಮತ್ತು ಸಮಕಾಲೀನ ಬಸದಿಗಳ ಬಗ್ಗೆ ದಾಖಲಿಸಿದ್ದಾನೆ. ಈತನು ಕ್ರಿ. ಶ. 1204 ರಲ್ಲಿ ರಚಿಸಿದ ಗೋಕಾಕ ತಾಲೂಕಿನ ಕಲ್ಲೋಳಿಯ ಶಾಸನದಲ್ಲಿ ರಟ್ಟರು ಮತ್ತು ಹಗರಟಗೆನಾಡಿನ ಯದುವಂಶದ ಮಹಾಮಂಡಳೇಶ್ವರರ ವಂಶಾವಳಿಯ ಬಗ್ಗೆ ವಿಸ್ತಾರವಾದ ವಿವರಣೆಯಿದೆ. ಕಲ್ಲೋಳಿ ಶಾಸನ ಕಲ್ಲೋಳಿಯ ಪಾರ್ಶ್ವನಾಥ

---

[37] ದಿಬ್ಬದ ಶಾಂತಿನಾಥ: *ನಾಗಚಂದ್ರ ಸಂಪುಟ (ರಾಮಚಂದ್ರ ಚರಿತ ಪುರಾಣಂ, ಮಲ್ಲಿನಾಥ ಪುರಾಣಂ)*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006, ಪು. xxxii.

[38] *ನಾಗಚಂದ್ರ ಸಂಪುಟ ( ರಾಮಚಂದ್ರ ಚರಿತ ಪುರಾಣಂ, ಮಲ್ಲಿನಾಥ ಪುರಾಣಂ*) 2006, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,2006,ಪು. xxxiv

[39] ಅದೇ ಪು,1v

[40] ನರಸಿಂಹಾಚಾರ: *ಕರ್ನಾಟಕ ಕವಿಚರಿತೆ ತೃತೀಯ ಸಂ, (18ನೆಯ ಮತ್ತು 19ನೆಯ ಶತಮಾನಗಳು)* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. 210,211.

[41] ಭುಜಬಲಿಶಾಸ್ತ್ರೀ: *ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ*, 1971, ಆದರ್ಶ ಗ್ರಂಥಮಾಲೆ, ಮೂಡಬಿದಿರೆ, ಪು.41.

[42] *ಕರ್ನಾಟಕ ಕವಿಚರಿತೆ ಸಂ, 1(14ನೆ ಶತಮಾನದ ಕೊನೆವರೆಗೆ)*, ಬೆಂಗಳೂರ ಪ್ರೆಸ್,1924, ಪು.284,285.

[43] *ಕರ್ನಾಟಕ ಜೈನ ಶಾಸನ ಸಂ, 4*, ಬೀಳಗಿ ಶಾಸನ, ಶಾಸನ ಸಂಖ್ಯೆ,47, ಪು.134.

[44] ಕನ್ನಡ ಸಾಹಿತ್ಯ ಚರಿತ್ರೆ, 1960, ಗೀತಾಬುಕ್ ಹೌಸ್ ಪು. 214

[45] ಶಾಮರಾಯ ತ.ಸು: *ಕನ್ನಡ ಸಾಹಿತ್ಯ ಚರಿತ್ರೆ*, ಉದಯರವಿ ಆಪಸೆಟ್, ಮೈಸೂರು, 2010, ಪು. 86.

[46] *ಕನ್ನಡ ಸಾಹಿತ್ಯ ಚರಿತ್ರೆ*, ಗೀತಾಬುಕ್ ಹೌಸ್, ಮೈಸೂರು,ಪು.218.

[47] *ಕರ್ನಾಟಕ ಕವಿಚರಿತೆ ಸಂ*,1, ಪು.322.

ಬಸದಿಯ ನವರಂಗದ ದ್ವಾರಬಂಧದ ಬಲಬದಿಯ ಗೋಡೆಯಲ್ಲಿದೆ. ಇದು ಕನ್ನಡ ಶಾಸನವಾಗಿದ್ದು ನಾಲ್ಕನೇ ಕಾರ್ತ್ಯವೀರನ ಕಾಲದ್ದಾಗಿದೆ.[48]ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕಲ್ಲೋಳಿ ಬಸದಿಯಲ್ಲಿರುವ ಶಾಸನವನ್ನು ಕವಿಕುಲತಿಲಕನಾದ ಪಾರ್ಶ್ವನು ರಚಿಸಿದ್ದಾನೆಂದು ದಾಖಲೆ ಸಿಗುತ್ತದೆ.[49]

**ಕವಿಕಂದರ್ಪ ಬಾಳಚಂದ್ರದೇವ :** ಬಾಳಚಂದ್ರದೇವನು ರಟ್ಟರ ಧರ್ಮಗುರುವಾಗಿದ್ದನು. ಯಾಪನೀಯ ಸಂಘದ ಸ್ವರ್ಣಪಾಷಾಣ ಗಚ್ಛದ ವೃಕ್ಷಮೂಲಗಣ ಪರಂಪರೆಯ ಬಾಳಚಂದ್ರದೇವನು ಪ್ರಸಿದ್ಧ ಕವಿಯೂ ಆಗಿದ್ದನು. ನಾಲ್ಕನೆ ಕಾರ್ತ್ಯವೀರನ ಕಾಲದಲ್ಲಿ ಬೆಳಗಾವಿಯ ಎರಡು ಶಾಸನಗಳನ್ನು ಕ್ರಿ. ಶ. 1204ರಲ್ಲಿ ರಚಿಸಿದ್ದಾನೆ. ಈ ಶಾಸನಗಳಲ್ಲಿ ರಟ್ಟರ ವಂಶಾವಳಿ, ಆಡಳಿತ, ಸಾಂಸ್ಕೃತಿಕ ಕೊಡುಗೆಗಳು ಮತ್ತು ಸಮಾಜಿಕ, ಆರ್ಥಿಕ ವಿಷಯಗಳ ದಾಖಲೆಗಳು ದೊರೆಯುತ್ತವೆ. ಬಾಳಚಂದ್ರದೇವನ ಧಾರ್ಮಿಕ ಚಟುಚಟಿಕೆಗಳಿಗೆ ಸಂಬಂಧಿಸಿದಂತೆ ಹೂಲಿ, ಉಗರಖೋಡ, ಮುಗದ, ಆಳ್ನಾವರ, ತಡಕೋಡದ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಕವಿಚಕ್ರವರ್ತಿ ಜನ್ನನು(1209) ತನ್ನ ಧರ್ಮಪತ್ನಿ ಲಕುಮಾದೇವಿ ತನ್ನ ತವರೂರಾದ ವೇಣುಪುರ(ಬೆಳಗಾವಿ)ದಲ್ಲಿದ್ದಾಗ ಬಾಳಚಂದ್ರದೇವನ ಬಳಿಯೇ ತನ್ನ ಧಾರ್ಮಿಕ ಶಿಕ್ಷಣವನ್ನು ಪಡೆದುಕೊಡಳೆಂದು '*ಅನಂತನಾಥ ಪುರಾಣ*'ದಲ್ಲಿ ಹೆಮ್ಮೆಯಿಂದ ಹೇಳಿದ್ದಾನೆ. ಪಾರ್ಶ್ವಪಂಡಿತನು *ಪಾರ್ಶ್ವನಾಥ ಪುರಾಣ*ದಲ್ಲಿ ಬಾಳಚಂದ್ರದೇವನನ್ನು ಗೌರವದಿಂದ ನೆನಪಿಸಿಕೊಂಡಿದ್ದಾನೆ. ಬೆಳಗಾವಿಯ 120ನೇ ಶಾಸನ ಬೆಳಗಾವಿ ನಗರದ ಕಮಲ ಬಸದಿಯಲ್ಲಿತ್ತು. ಈಗ ಬ್ರಿಟಿಷ ವಸ್ತು ಸಂಗ್ರಹಾಲಯದಲ್ಲಿದೆ. ಇದನ್ನು ಕವಿಕಂದರ್ಪ ಬಿರುದಾಂಕಿತ ಬಾಳಚಂದ್ರಕವಿ ರಚಿಸಿದ್ದಾನೆ.[50] ಬೆಳಗಾವಿಯ 121ನೇ ಶಾಸನ ಸವದತ್ತಿ ರಟ್ಟರ ನಾಲ್ಕನೆ ಕಾರ್ತ್ಯವೀರನ ಕಾಲದ ಜೈನ ಶಾಸನವು ಕಮಲ ಬಸದಿಯಲ್ಲಿತ್ತು. ಈಗ ಬ್ರಿಟಿಷ ಸಂಗ್ರಹಾಲಯದಲ್ಲಿದೆ. ಇದನ್ನು ಕೂಡ ಕವಿಕಂದರ್ಪ ಬಾಳಚಂದ್ರ ರಚಿಸಿದ್ದಾನೆ.[51] ಬೆಳಗಾವಿಯ ಶಾಸನದಲ್ಲಿ ರಟ್ಟರ ಸೇನ ಅರಸನ ಮೂರನೇ ಮಗ ಕಾರ್ತ್ಯವೀರ ಮತ್ತು ಅವನ ಪತ್ನಿ ಪದ್ಮಾವತಿ ಮಗ ಲಕ್ಷ್ಮಣನನ್ನು ಈ ಶಾಸನ ಹೊಗಳಿದೆ. ಬೀಚರಾಜನು ಮಾಡಿಸಿದ ರಟ್ಟ ಜಿನಾಲಯದ ಶಾಂತಿನಾಥ ದೇವರ ನಿತ್ಯಪೂಜೆ, ಅಭಿಷೇಕಗಳಿಗೆ ವೀರಮಲ್ಲಿಕಾರ್ಜುನ ದೇವನು ದಾನ ನೀಡಿದ ವಿವರವಿದೆ. ಈ ಶಾಸನದಲ್ಲಿ ಕವಿ ಕಂದರ್ಪನನ್ನು 'ಚತುರ್ಭಾಷಾ ಕವಿ' ಎಂದು ಹೊಗಳಿದೆ.[52] ಬೆಳಗಾವಿಯ(ಸಂಖ್ಯೆ 65) ಶಾಸನದಲ್ಲಿ (ಕಮಲಬಸದಿಯಲ್ಲಿದ್ದ) ರಟ್ಟ ಜಿನಾಲಯದ ರಚನಾಕಾರ ಬೀಚನ ಗುರು ಪರಂಪರೆಯ ಮೂಲಸಂಘದ ಕೊಂಡಕುಂದಾನ್ವಯದ ದೇಶಿಯ ಗಣದ ಪುಸ್ತಕಗಚ್ಛದ ಮಲಧಾರಿದೇವರಿದ್ದರು. ಅವರ ಶಿಷ್ಯರಾದ ನೇಮಿಚಂದ್ರ ಮತ್ತು ಶುಭಚಂದ್ರ ಭಟ್ಟಾರಕರು. ಈ ಶುಭಚಂದ್ರ ಭಟ್ಟಾರಕರ ಕಾಲನ್ನು ತೊಳೆದು ದಾನ ನೀಡಿದಂತೆ ಉಲ್ಲೇಖ ದೊರೆಯುತ್ತದೆ. ಈ ಶಾಸನ ಪಠ್ಯವನ್ನು ಕವಿ ಕಂದರ್ಪನು ರಚಿಸಿದ್ದಾಗಿ ಶಾಸನ ತಿಳಿಸುತ್ತದೆ.[53]

**ರಾಜಾದಿತ್ಯ :** ಈತನು ಜೈನ ಕವಿಯಾಗಿದ್ದು ಇವನ ಕಾಲ ಸುಮಾರು 1120 ಎಂದು ಹೇಳಬಹುದು. 'ಕೂಂಡಿಮಂಡಲಕ್ಕನು ಪಮರತ್ನ ಮಂಡನಮೆನಿಪ್ಪ ಪೂವಿನಬಾಗೆ(ರಾಯಬಾಗ)ದವನು. ಇವನ ಪತ್ನಿ ಕನಕಮಾಲೆ, ರಾಜಾದಿತ್ಯನು ಕೇವಲ ಗಣಿತಜ್ಞ ಮಾತ್ರವಲ್ಲದೆ ಉತ್ತಮ ಕವಿ ಕೂಡಾ ಆಗಿದ್ದು, ತನ್ನ ವೈಯಕ್ತಿಕ ಜೀವನದ ಬಗ್ಗೆ ಈ ಮುಂದಿನ ಪದ್ಯದ ಮೂಲಕ ಹೇಳಿದ್ದಾನೆ. "ಜಿನನಾಥಂ ನೇಮಿನಾಥಂ ನಿಜಗುರು ಶುಭಚದ್ರೋತ್ತಮಂ ತಂದೆ ಸರ್ವಾ ವನಿಸಂಸ್ತುತ್ಯಾಸ್ಪಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ ತನುಮಂತಾಯೋಗಂ ಬಾಹುಬಲಿ ಭರತರಾತ್ಮೀಯರಂ ತಾಮೆನರ್ಲ ಬಾ ಪ್ಪೆನೆ ರಾಜಾದಿತ್ಯನೇಂ ಧನ್ಯನೊ ವಿಶದಯಶಂ ಸದ್ಗುಣಾಂಬೋಧಿಚಂದ್ರಂ" ಎಂದು ಹೇಳಿಕೊಂಡಿದ್ದಾನೆ. ಅಂದರೆ ಆರಾಧ್ಯದೈವ 22ನೇ ತೀರ್ಥಂಕರ ನೇಮಿನಾಥ, ತಂದೆ ಶ್ರೀಪತಿ, ತಾಯಿ ವಸಂತಾಖ್ಯೆ, ಸಹೋದರ ಶಾಂತ(ಶಾಂತಿನಾಥ ಇರಬಹುದು) ಮತ್ತು ತಾನು ಭರತ–ಬಾಹುಬಲಿ ಇದ್ದ ಹಾಗೆ ಇದ್ದೆವು ಎಂದು ಹೇಳಿದ್ದಾನೆ.[54]

ಇವನ ಕೃತಿಗಳು *ವ್ಯವಹಾರ ಗಣಿತ, ಕ್ಷೇತ್ರಗಣಿತ, ಲೀಲಾವತಿ, ಚಿತ್ರಹಸುಗೆ, ಜೈನ ಗಣಿತಸೂತ್ರೋದಾಹರಣ* ಮುಂತಾದ ಗಣಿತಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದರಿಂದ ಈತನಿಗೆ ಗಣಿತ ವಿಳಾಸ, ಓಜೆವೆಡಂಗ, ಪದ್ಯವಿದ್ಯಾಧರ ಎಂಬ ಬಿರುದುಗಳು ಇದ್ದವೆಂದು ತಿಳಿಯುತ್ತದೆ. ಈತನು 'ಉರ್ವೀಶ್ವರನಿಕರಸಭಾಯೋಗ್ಯಂ' ಎಂದು ಹೇಳಿದ್ದರಿಂದ ಇವನು ರಾಜನ ಆಸ್ಥಾನ ಪಂಡಿತನಾಗಿದ್ದನು ಎಂದು ತಿಳಿಯುತ್ತದೆ. ಈತನ ವ್ಯವಹಾರ ರತ್ನದಲ್ಲಿ ವಿಷ್ಣುನೃಪಾಲ(ವಿಷ್ಣುವರ್ಧನ) ದೊರೆಯಿರಬಹುದೆಂದು ಊಹಿಸಲಾಗಿದೆ. ಅದಲ್ಲದೆ 117ನೇ ಶ್ರವಣಬೆಳಗೊಳ ಶಾಸನದಲ್ಲಿ ಶುಭಚಂದ್ರನ ಉಲ್ಲೇಖ(1123)ವಿದೆ. ಆದ್ದರಿಂದ ಈತನೇ ರಾಜಾದಿತ್ಯನ ಗುರುವಾಗಿರಬಹುದು ಎಂದು ತಿಳಿಯಬಹುದಾಗಿದೆ.[55]

---

48 *ಗೋಕಾಕ ಪರಿಸರದಲ್ಲಿ ಜೈನ ಧರ್ಮ*, ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ, 2016, ಪು.42,170.

49 *ಕರ್ನಾಟಕ ಜೈನ ಶಾಸನಗಳು ಸಂ, 4*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2019, ಪು. 230

50 ಹಂದೂರ ಬಿ.ಆರ್: *ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು*, 2010, ಪು. 169

51 ಅದೇ ಪು, 176.

52 *ಕರ್ನಾಟಕ ಜೈನ ಶಾಸನಗಳು ಸಂ, 4*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 163,164. ಶಾಸನ ಸಂಖ್ಯೆ 64.

53 *ಕರ್ನಾಟಕ ಜೈನ ಶಾಸನಗಳು ಸಂ, 4*, ಪ್ರಸಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು 169, 170

54 ತಪಕೀರೆ ನೇಮಿನಾಥ: *ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ*, ಇಂದನೀಲಮಣಿಂ ಪ್ರಕಾಶನ, ಚಿಕ್ಕೋಡಿ, 2022, ಪು.352.

55 ನರಸಿಂಹಾಚಾರ ಸಂ, 1, ಪು.122.123.

**ರಾಜಾದಿತ್ಯನ ಕೃತಿಗಳು :** *ವ್ಯವಹಾರ ಗಣಿತ* ಕೃತಿಯು 8 ಅಧಿಕಾರ(ಅಧ್ಯಾಯ)ಗಳನ್ನು ಹೊಂದಿದೆ. ಇದನ್ನು ಐದು ದಿನಗಳಲ್ಲಿ ಬರೆದಿದ್ದಾನೆ. ಇದರಲ್ಲಿ ನೇಮಿನಾಥ ತೀರ್ಥಂಕರನನ್ನು ಸ್ಮರಿಸಿದ್ದಾನೆ. ರಾಜಾದಿತ್ಯನೇ ಕನ್ನಡದಲ್ಲಿ ಗಣಿತಶಾಸ್ತ್ರವನ್ನು ಬರೆದ ಮೊದಲ ಕವಿಯಾಗಿದ್ದಾನೆ ಎಂದು ಹೇಳಬಹುದು.[56] ರಾಜಾದಿತ್ಯನ *ವ್ಯವಹಾರ ಗಣಿತ*ದಲ್ಲಿ ಕೂಹುಂಡಿ–3000ದ ಉಲ್ಲೇಖ ಕಂಡುಬರುತ್ತದೆ.[57] *ಲೀಲಾವತಿ* ಗ್ರಂಥದಲ್ಲಿ ಲೆಕ್ಕಗಳನ್ನು ಮಾಡಿ ತೋರಿಸಿದ್ದಾನೆ.[58]

ರಾಜಾಧಿತ್ಯನು ಬಾಳಿ ಬದುಕಿದ ಪ್ರದೇಶ ಅರಣ್ಯ, ದನಧಾನ್ಯಗಳು ಬೆಳೆಯುವ ಪ್ರದೇಶವಾಗಿದ್ದು ಜೈನಧರ್ಮ ಪ್ರಮುಖವಾಗಿದ್ದ ಕುಹೂಂಡಿ ಮಂಡಲದಲ್ಲಿ ಪೂವಿನಬಾಗೆ (ರಾಯಬಾಗ) ಇದೆ ಎಂದು ಹೇಳಿದ್ದಾನೆ. ಇಲ್ಲಿ ಕೇದಗೆ, ಜಾಜಿ, ಪಾಟಲಿ, ಸೇವಂತಿಗೆ, ನೀಲಕಮಲ, ಸುರಹೊನ್ನೆ, ಸಂಪಿಗೆ, ಮಲ್ಲಿಗೆ ಮುಂತಾದ ಹೂವುಗಳನ್ನು ಬೆಳೆಯುತ್ತಿದ್ದ ಪ್ರದೇಶಕ್ಕೆ ಹೂವಿನಬಾಗೆ ಎಂದು ಹೆಸರು ಬಂದಿದೆ ಎಂದು ಕವಿ ಹೇಳಿದ್ದಾನೆ.[59]

## ಉಪಸಂಹಾರ

ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯ ರಾಜರ ಆಶ್ರಯ ಮತ್ತು ಪ್ರೋತ್ಸಾಹದಿಂದಲೇ ಬೆಳೆಯಿತು. ರಾಜರ ಆಶ್ರಯ ಪಡೆದವರಲ್ಲಿ ಜೈನ ಕವಿಗಳೇ ಹೆಚ್ಚಾಗಿದ್ದದ್ದು ಮಹತ್ವವಾದ ಸಂಗತಿಯಾಗಿದೆ. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಸವದತ್ತಿ ರಟ್ಟರು, ಶಿಲಾಹಾರರು, ಕೊಂಗಾಳ್ವರು, ವಿಜಯನಗರದ ಅರಸರು, ಕೆಲವು ಪಾಳೆಗಾರರು, ಮಂತ್ರಿಗಳು, ಸೇನಾಧಿಪತಿಗಳು, ಜೈನ ಕವಿಗಳಿಗೆ ಆಶ್ರಯ ನೀಡಿದ್ದರು. ರಾಜರು ಮತ್ತು ಅವರ ಅಧಿಕಾರಿಗಳಲ್ಲಿ ಕೆಲವರು ಸ್ವತಃ ಕವಿಗಳಾಗಿದ್ದರು.

ಜೈನ ಕಾವ್ಯಗಳು, ಕೃತಿಗಳು ಕೇವಲ ಜೈನ ಧರ್ಮಕ್ಕೆ ಮಾತ್ರವಲ್ಲದೇ ಸಮಗ್ರ ಕನ್ನಡ ಭಾಷೆ–ಸಾಹಿತ್ಯ ಬೆಳವಣಿಗೆಗೆ ಉಪಯುಕ್ತವಾಗಿವೆ. ಕನ್ನಡಕ್ಕೆ ಮೊದಲ ಬಾರಿಗೆ ವ್ಯಾಕರಣವನ್ನು ನೀಡಿದ ಹೆಗ್ಗಳಿಕೆ ಜೈನ ಕವಿಗಳದ್ದಾಗಿದೆ. ಕವಿಚಕ್ರವರ್ತಿಗಳು, ರತ್ನತ್ರಯರು, ಸೀಮಾಪುರುಷರೆಂಬ ಮಹಾಕವಿಗಳನ್ನು ಜೈನ ಸಾಹಿತ್ಯ ನೀಡಿದೆ. ಪಂಪನ *ಆದಿಪುರಾಣ*ದಲ್ಲಿನ ನೀಲಾಂಜನೆಯ ನೃತ್ಯದಲ್ಲಿ ಪಂಪನು ಸಜೀವ ಚಿತ್ರಣವನ್ನು ಕೊಟ್ಟಿದ್ದಾನೆ. ದುರಂತ ಅಂತ್ಯವುಳ್ಳ ಪಂಪನ ಕರ್ಣ, ರನ್ನನ ದುರ್ಯೋಧನ, ನಾಗಚಂದ್ರನ ರಾವಣನ ಪಾತ್ರಗಳು ಕನ್ನಡ ಕಾವ್ಯ ಪ್ರಪಂಚಕ್ಕೆ ಜೈನ ಕವಿಗಳು ತಂದ ನಾವೀನ್ಯಗಳಾಗಿವೆ. ಕನ್ನಡ ನಾಡಿನ ಸಂಸ್ಕೃತಿಯನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸುವಲ್ಲಿ ಜೈನ ಕವಿಗಳು ಯಶಸ್ವಿಯಾಗಿದ್ದಾರೆ. ಕನ್ನಡದ ಜೈನ ಸಾಹಿತ್ಯವು ಅಮೂಲ್ಯ ಬೆಲೆಯುಳ್ಳ ಸಂಪತ್ತಾಗಿದೆ. ಅದರಲ್ಲೂ ಕಿತ್ತೂರು ಕರ್ನಾಟಕ ಭಾಗದ ಜೈನ ಕವಿಗಳ ಕೊಡುಗೆ ಕನ್ನಡ ಜೈನ ಸಾಹಿತ್ಯಕ್ಕೆ ಅಪಾರವಾದುದಾಗಿದೆ.

---

[56] ಅದೇ ಪು.122,123

[57] *ಗೋಕಾಕ ಪರಿಸರದಲ್ಲಿ ಜೈನಧರ್ಮ*, ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ, 2016, ಪು.38.

[58] ನರಸಿಂಹಾಚಾರ ಸಂ, 1 ಪು. 127.

[59] ತಪಕೀರೆ ನೇಮಿನಾಥ: *ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ,* ಇಂದನೀಲಮಣಿ ಪ್ರಕಾಶನ, ಚಿಕ್ಕೋಡಿ, 2022, ಪು.353.